
ಜನಪದ ಸೇವಕ

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೬ ಮಾರ್ಚ-೨೦೦೬ ಸಂಚಿಕೆ-೮



ಪ್ರಾಪಂಚಿಕರ ಮುಕ್ತಿಗಾಗಿ

ಸೆರೆಮನೆಯಲ್ಲಿ ರಚಿತವಾಯಿತು ವಿನೋಬಾರ

ಗೀತಾಪ್ರವಚನ

ಈಗ ಅದರ ಅಮೃತ ಮಹೋತ್ಸವ

ಜನಪದ ವಿಚಾರ
ತಿಂಗಳ ವೈಚಾರಿಕ ಡೈಜೆಸ್ಟ್

ಮಾರ್ಚ್-೨೦೦೬
ಸಂಪುಟ-೬
ಸಂಚಿಕೆ-೮

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧ ೪೩೧
ಮಂಡ್ಯ ಜಿಲ್ಲೆ

(08236)298754
e-mail-janapada@yahoo.com
www.janapada.org

ನನ್ನ ನಗು

ಎಲ್ಲೋ ಕಳೆದು ಹೋಗಿದೆ ನನ್ನ ನಗು
ಎಲ್ಲೋ ಕಳೆದು ಹೋಗಿದೆ
ಕಪ್ಪು ರಸ್ತೆಯ ಮೇಲೆ
ವಾಹನಗಳ ಚಕ್ರದಡಿ ಚೆಲ್ಲಿದ ಕೆಂಪು ಕಲೆಗಳಲ್ಲಿ
ಗಗನ ಚುಂಬಿ ಮಹಲುಗಳ ಮೇಲೆ
ಅಡಿಗಲ್ಲು ಕೆಳಗೆ
ಪಾರ್ಕುಗಳಲ್ಲಿ ಕಣ್ಣುಬಿಡುವ ಹೂವುಗಳಲ್ಲಿ
ಮಿನುಗುವ ನಕ್ಷತ್ರಗಳಲ್ಲಿ
ದೀಪ ಕಂಬಗಳ ಕೆಳಗೆ ಬಿದ್ದ ಅನಾಥ ಪ್ರಜ್ಞೆಯಲ್ಲಿ
ಎಲ್ಲೋ ನನ್ನ ನಗೆ ಕಳೆದು ಹೋಗಿದೆ!
ಕಮರಿದ ತುಟಿಗಳಲ್ಲಿ, ನಿಸ್ತೇಜ ಕಣ್ಣುಗಳಲ್ಲಿ
ಬತ್ತಿದೆದೆಯ ಒಳಗೆ ದುಃಖಿಸಿದ ಬಿಕ್ಕಳಿಕೆಗಳಲ್ಲಿ
ಉಸಿರ ಬೆಂಕಿಯಲ್ಲಿ
ಗುಡಿಸಿಲುಗಳ ಚಪ್ಪರದ ತೂತೂಗಳಲ್ಲಿ
ಎಲ್ಲೋ ನನ್ನ ನಗೆ ಕಳೆದು ಹೋಗಿದೆ!
ವೇದಿಕೆಗಳ ಮೇಲೆ ಸಿಡಿಲು ಆಶ್ವಾಸನೆಗಳಲ್ಲಿ
ರಸ್ತೆ ಓಣಿ ಸಂದಿಯ ಹಸಿದ ಕೂಗುಗಳಲ್ಲಿ
ಬಂದೂಕಿನ ತೂತಿನಲ್ಲಿ ಬಸಿದ ಒಡಲ ನೆತ್ತರಿನಲ್ಲಿ
ಎಲ್ಲೋ ನನ್ನನಗೆ ಕಳೆದು ಹೋಗಿದೆ!
ಎಲ್ಲಿ ಕಳೆದು ಹೋಯಿತು ನನ್ನ ನಗೆ?
ಎಲ್ಲೆಂದರಲ್ಲಿ ಬಿತ್ತಿದೆನು ನನ್ನ ನಗು
ಕನಸುಗಳ ಕೆತ್ತುತ್ತಲೇ ಬತ್ತಿ ಹೋಯಿತು ನನ್ನ ನಗು
ಹದವಿಲ್ಲದ ನೆಲದಲ್ಲಿ ಬತ್ತಿ ಹೋಯಿತು!

-ಅಮರೇಶ್. ಎನ್.

ವಿಚಾರ ದೀಪ್ತಿ

ವಿಶ್ವದಾದ್ಯಂತ ಸಮುದ್ರಗಳು ವರ್ಷವೊಂದಕ್ಕೆ ೨-೪ ಮಿ.ಮೀ ರಷ್ಟು ಎತ್ತರಕ್ಕೆ ಏರುತ್ತಿವೆ. ಇದಕ್ಕೆ ಅರ್ಧದಷ್ಟು ಕಾರಣ ಸಮುದ್ರ ತೀರದ ಬಳಿ ನಡೆಯುವ ಕೈಗಾರಿಕಾ ಚಟುವಟಿಕೆಗಳು. ಇನ್ನರ್ಧ ಕಾರಣ ಪ್ರಾಕೃತಿಕ ಏರು- ಪೇರುಗಳು. ಈ ಅಂಕಿ ಸಂಖ್ಯೆ ಚಿಕ್ಕದಾಗಿ ಕಂಡರೂ ಇತರೆ ಏರು-ಪೇರುಗಳು ಮಾನವಕುಲಕ್ಕೆ ಅಶುಭಕರವಾದ ಸಂಕೇತಗಳನ್ನು ಕೊಡುತ್ತವೆ. ದಕ್ಷಿಣ ಲೂಸಿಯಾನ ಮತ್ತು ನೆದರ್‌ಲ್ಯಾಂಡ್ಸನ ಪಶ್ಚಿಮ ತೀರದಂಥ ಪ್ರದೇಶವು ಅದೇ ಗತಿಯಲ್ಲಿ ಮುಳುಗುತ್ತಿವೆ. ಬಿರುಗಾಳಿ ಮತ್ತು ಸುಂಟರಗಾಳಿ ಪದೇ ಪದೇ ಬಹು ತೀವ್ರತರವಾಗಿ ಸಂಭವಿಸುವುದರಿಂದ ಎತ್ತರವಾದ ಅಲೆಗಳು ಮತ್ತು ಬಿರುಸಾದ ಗಾಳಿ, ಸಮುದ್ರವನ್ನು ಭೂಮಿಯೊಳಕ್ಕೆ ತಳ್ಳುತ್ತವೆ. ಈಗಾಗಲೆ ಕಲುಷಿತಗೊಂಡಿರುವ ಜಲಮೂಲಗಳು ಇನ್ನೂ ಹೆಚ್ಚು ಕಲುಷಿತಗೊಳ್ಳುತ್ತವೆಯಲ್ಲದೆ ಸಮುದ್ರ ತೀರದಲ್ಲಿಯ ಭೂಮಿ ಕೆಳಗಿಳಿಯುತ್ತದೆ. ೨೧ ನೇ ಶತಮಾನದಲ್ಲಿ ವಿಶ್ವದಾದ್ಯಂತ ಸಮುದ್ರಗಳು ಕೊನೆಪಕ್ಷ ಅರ್ಧ ಮೀಟರಿನಷ್ಟಾದರೂ ಏರುವವು. ೨೨೦೦ನೇ ಇಸವಿಯ ವೇಳೆಗೆ ೧.೫ ಮೀ ನಷ್ಟು ಏರುವುವು. ಆದರೆ ಈ ಸಂಖ್ಯೆ ಒಂದು ರೀತಿಯಲ್ಲಿ ತಪ್ಪಾದ ನೆಮ್ಮದಿಯನ್ನು ಕೊಡಬಹುದು. ಏಕೆಂದರೆ ಸಾಮಾನ್ಯವಾಗಿ ಒಂದು ಅಡಿ ಸಮುದ್ರ ಮಟ್ಟದ ಏರಿಕೆಯಿಂದಾಗಿ ನೀರು ಸಾವಿರಾರು ಅಡಿ ಭೂಮಿಯೊಳಕ್ಕೆ ನುಗ್ಗುತ್ತದೆ. ಅನೇಕ ಸಮುದ್ರ ತೀರದ ನಗರಗಳು ಕಡ್ಡಾಯವಾಗಿ ಸಮುದ್ರದ ಮಟ್ಟದಲ್ಲಿಯೆ ಇರುತ್ತವೆ. ಇನ್ನೂ ಕೆಲವು ಸಮುದ್ರ ಮಟ್ಟಕ್ಕೆ ಹಲವಾರು ಮೀಟರು ಕೆಳಗಡೆಯಿವೆ. ಅದರಿಂದಾಗಿ ಆ ನಗರಗಳಲ್ಲಿಯ ಜನಸಂಖ್ಯೆ ಮತ್ತು ವಾಣಿಜ್ಯ ವ್ಯವಹಾರ ಸಮುದ್ರ ತೀರವನ್ನು ಬಹಳವಾಗಿ ಅವಲಂಬಿಸಿರುತ್ತದೆ ಆದ್ದರಿಂದ ಸಮುದ್ರ ಮಟ್ಟದ ಸಾಮಾನ್ಯ ಏರಿಕೆ ಕೂಡ ಬಹು ಅನರ್ಥಕಾರಿಯಾಗಬಹುದು ಅದರಲ್ಲಿಯೂ ಮುಖ್ಯವಾಗಿ ಬಾಂಗ್ಲಾದೇಶ, ಶಾಂತಿಸಾಗರ ದ್ವೀಪಗಳು ಇನ್ನೂ ಹೆಚ್ಚು ಅಪಾಯಕ್ಕೆ ಒಳಗಾಗುವವು. ಅಲ್ಲಿಯ ಸರ್ಕಾರಗಳು ತಡೆಗೋಡೆಯನ್ನು ಕಟ್ಟುವ ಖರ್ಚನ್ನು ನಿರ್ವಹಿಸಲಾರವು. ೨೧ ನೇ ಶತಮಾನದಲ್ಲಿ ಸಮುದ್ರ ಮಟ್ಟದ ಏರಿಕೆಯನ್ನು ತಡೆಯುವುದು ಅತ್ಯಂತ ದುಬಾರಿ ಕೆಲಸವಾಗುತ್ತದೆ. ೨೨ ನೇ ಶತಮಾನದ ವೇಳೆಗೆ ಸಮುದ್ರಗಳು ಇಂದಿಗಿಂತ ೧.೫ ಮೀ ನಷ್ಟು ಎತ್ತರಕ್ಕೇರುವುದರಿಂದ ಸಮುದ್ರದ ತೀರದಲ್ಲಿರುವ ದೊಡ್ಡ ನಗರಗಳನ್ನು ತೆರವು ಮಾಡಬೇಕಾಗುತ್ತದೆ.

- ಮಾರ್ಕ್‌ಸೋಮರ್

ಪ್ರಾಪಂಚಿಕರ ಮುಕ್ತಿಗಾಗಿ ಸೆರೆಮನೆಯಲ್ಲಿ ರಚಿತವಾಯಿತು ವಿನೋಬಾರ ಗೀತಾಪ್ರವಚನ ಈಗ ಅದರ ಅಮೃತ ಮಹೋತ್ಸವ

–ಸುರೇಂದ್ರ ಕೌಲಗಿ

"ಓ ದೇವರೇ, ಪೂರ್ಣಚಂದ್ರನ ರಾತ್ರಿಯನ್ನು ಕೊಡುವುದರ ಬದಲು ಚಂದ್ರರಹಿತ ರಾತ್ರಿಯನ್ನು ಕೊಡು. ಪೂರ್ಣಚಂದಿರ ಬಿಮ್ಮಿನಿಂದ ಪ್ರಕಾಶಿಸುತ್ತಾ ಇತರ ನಕ್ಷತ್ರಗಳನ್ನು ಮಂಕುಗೊಳಿಸುತ್ತಾನೆ. ಇತರರನ್ನು ಕಾಂತಿಹೀನರನ್ನಾಗಿ ಮಾಡುವ ಹಿರಿತನ ನನಗೆ ಬೇಕಿಲ್ಲ." *– ವಿನೋಬಾ*

ಆಚಾರ್ಯ ವಿನೋಬಾ ಭಾವೆಯವರು ೧೯೩೨ರಲ್ಲಿ ಧುಳಿಯಾ ಕಾರಾಗೃಹದಲ್ಲಿ ಬಂಧಿತರಾಗಿದ್ದಾಗ ಅಲ್ಲಿಯ ಎಲ್ಲ ಪ್ರಕಾರದ ಕೈದಿಗಳ ಸಮೂಹವನ್ನು ಉದ್ದೇಶಿಸಿ ಪ್ರತಿ ಭಾನುವಾರದಂದು ಗೀತೆಯನ್ನು ಕುರಿತು ಮಾಡಿದ ಪ್ರವಚನಗಳ ಸಂಗ್ರಹವೇ 'ಗೀತಾ ಪ್ರವಚನ' ಇದು ಇಂಗ್ಲಿಷ್ ಸೇರಿದಂತೆ ಭಾರತದ ಎಲ್ಲಾ ಭಾಷೆಗಳಲ್ಲೂ ಪ್ರಕಟವಾಗಿದೆ. ಪ್ರತಿಯೊಂದು ಭಾಷೆಯಲ್ಲೂ ಲಕ್ಷಾನುಗಟ್ಟಲೆ ಪ್ರತಿಗಳು ಮಾರಾಟವಾಗಿವೆ. ಈಗಲೂ ಸಹ ೭೫ ವರ್ಷಗಳ ತರುವಾಯ, 'ಗೀತಾ ಪ್ರವಚನ'ದ ಮಾರಾಟ ಆಯಾ ಭಾಷೆಗಳಲ್ಲಿಯು ಮಿಕ್ಕೆಲ್ಲಾ ಪುಸ್ತಕಗಳಿಗಿಂತ ಅಧಿಕವಾಗಿ ಮಾರಾಟವಾಗುತ್ತಾ ದಾಖಲೆಯನ್ನೇ ಸೃಷ್ಟಿಸಿದೆ. ಈ ಪುಸ್ತಕದ ಕನ್ನಡ ಅನುವಾದ ಕನ್ನಡದ ಸಿದ್ಧಹಸ್ತ ಸಾಹಿತಿ ಸಿದ್ದವನಹಳ್ಳಿ ಕೃಷ್ಣಶರ್ಮರಿಂದ ಆಗಿ, ಅತ್ಯಂತ ಉತ್ತಮ ಅನುವಾದವೆಂದು ವಿನೋಬಾರಿಂದಲೇ ಮೆಚ್ಚುಗೆ ಪಡೆದಿದೆ. ಈಗ ದೇಶದಾದ್ಯಂತ 'ಗೀತಾ ಪ್ರವಚನ'ದ ಅಮೃತ ಮಹೋತ್ಸವವನ್ನು ಆಚರಿಸಲಾಗುತ್ತಿದೆ.

ಈ ಪುಸ್ತಕ ಕಾರಾಗೃಹದಲ್ಲಿ ರಚಿತವಾಯಿತಾದರೂ ಪುಸ್ತಕದ ಹಿಂದೆ ಇದ್ದ ಉದ್ದೇಶ್ಯ, ಕಾರಾಗೃಹದಲ್ಲಿದ್ದ ಸಹಕೈದಿಗಳ ಮನಸ್ಸನ್ನು ಹಗುರಗೊಳಿಸುವುದು, ಸಮಯದ ಭಾರವನ್ನು ಕಡಿಮೆ ಮಾಡುವುದು ಆಗಿತ್ತಾದರೂ ತಾವು ಸ್ವತಂತ್ರರೆಂದು ಹೇಳಿಕೊಳ್ಳುತ್ತಾ ವಾಸ್ತವವಾಗಿ ಅನೇಕ ಲೌಕಿಕ ಸಮಸ್ಯೆಗಳಲ್ಲಿ ಬಂಧಿತರಾಗಿ ಜೀವಾವಧಿ ಶಿಕ್ಷೆಯನ್ನು ಅನುಭವಿಸುತ್ತಿರುವ 'ಸ್ವತಂತ್ರ' ಜನರಿಗೆ ನಿಜವಾದ ಮುಕ್ತಿಯ ಮಾರ್ಗ ತೋರಿಸಿ ಅವರನ್ನು ಬಿಡುಗಡೆ ಮಾಡಬೇಕೆಂಬುದೇ ಆಗಿತ್ತು. ಏಕೆಂದರೆ

ಕಾರಗೃಹದಲ್ಲಿರುವ ಕೈದಿಗಳು, ಹೊರಜಗತ್ತಿನಲ್ಲಿರುವ ಜನರು ಅವರು ಯಾರೇ ಆಗಿರಲಿ "ಅವರಲ್ಲಿ ತಮ್ಮ ದೇಹದ ಬಗ್ಗೆ ಸಂಕುಚಿತ ಬುದ್ಧಿ ಇದೆ; ನಾನು ನನ್ನ ಬಳಗ ಇಷ್ಟೇ ಲೋಕ; ಉಳಿದವರೆಲ್ಲಾ ಹಗೆ ಎಂಬ ಭೇದ ಬುದ್ಧಿಗೆ ಇದು ಬೀಜವಾಗಿದೆ. ನಾನು ನನ್ನದು ಎಂಬುವವನು ತನ್ನ ಶರೀರವನ್ನು ಮಾತ್ರ ನೋಡುತ್ತಾನೆ. ದೇಹ ಮತ್ತು ಬುದ್ಧಿ ಈ ಬಗೆಯ ಪೇಚಿಗೆ ಸಿಕ್ಕಿ ಪರಿಪರಿಯ ಕೂಪಗಳನ್ನು ಮಾಡಿಕೊಳ್ಳುತ್ತಾನೆ. ಬಹುಶಃ ಎಲ್ಲರೂ ಇದನ್ನೇ ಮಾಡುತ್ತಿರುತ್ತಾರೆ. ಕೆಲವರದು ಸಣ್ಣಕೂಪ, ಕೆಲವರದು ದೊಡ್ಡದು. ಅಂತೂ ಕೂಪ. ಈ ಮೈಯ ಚರ್ಮದಷ್ಟೇ ಅದರ ಆಳ, ಇಷ್ಟೇ. ಕೆಲವರು ಕುಟುಂಬಾಭಿಮಾನದ ಕೂಪು ಮಾಡಿಕೊಂಡರೆ ಕೆಲವರು ದೇಶಾಭಿಮಾನದ್ದು, ಬ್ರಾಹ್ಮಣ-ಬ್ರಾಹ್ಮಣೇತರ, ಹಿಂದೂ-ಮುಸಲ್ಮಾನ, ಒಂದಲ್ಲಾ ಎರಡಲ್ಲಾ ಕೊನೆಯಿಲ್ಲದ ವಿಭೇದ. ಎತ್ತನೋಡಿದರತ್ತ ಅದುವೇ ಅದು. ಜೈಲಿನಲ್ಲೂ ರಾಜಕೀಯ ಕೈದಿ, ಇತರ ಕೈದಿ ಎಂಬ ವಿಭಾಗ. ಈ ಭೇದಗಳಿಲ್ಲದೆ ಬದುಕುವುದೇ ಕಷ್ಟ. ಆದರೆ ಇದರ ಪರಿಣಾಮವೋ? ಒಂದೇ; ಹೀನ ವಿಕಾರದ ಪ್ರಾಣಿ, ಸ್ವಧರ್ಮ ರೂಪ ಆರೋಗ್ಯದ ನಾಶ" ಎಂದು ವಿನೋಬಾ ತಮ್ಮ ಪ್ರವಚನದಲ್ಲಿ ಹೇಳುತ್ತಾರೆ. ಅವರ ಉದ್ದೇಶ್ಯ ಎಲ್ಲರನ್ನೂ ಈ ಎಲ್ಲ ಬಗೆಯ ಕೂಪಗಳಿಂದ ಹೊರತಂದು ಸ್ವತಂತ್ರಗೊಳಿಸುವುದೇ ಆಗಿದೆ. ಸ್ವತಃ ಸ್ವತಂತ್ರನಾಗಿರದ ಮನುಷ್ಯ ಬಂಧಿತರಾದ ಬೇರೊಬ್ಬರನ್ನು ಹೇಗೆ ತಾನೆ ಸ್ವತಂತ್ರಗೊಳಿಸಬಲ್ಲ? ಆದರೆ ವಿನೋಬಾ ಕಾರಾಗೃಹದಲ್ಲಿದ್ದರೂ, ಎಲ್ಲರಂತೆ ನರಜನ್ಮ ಪಡೆದಿದ್ದರೂ, ದೇಹವನ್ನು ಪಡೆದಿದ್ದರೂ ತಮ್ಮ ಆಜೀವ ಬ್ರಹ್ಮಚರ್ಯದ ಪ್ರತಿಜ್ಞೆಯ ಕಾರಣದಿಂದಾಗಿ ಮುಕ್ತಾನಂದವನ್ನು ಕೊಡುವ ಬ್ರಹ್ಮಜ್ಞಾನದ ಶೋಧನಾಮಾರ್ಗದ ಪಥಿಕರಾಗಿದ್ದರು, ಸಾಧಕರಾಗಿದ್ದರು, ಬಹಳಷ್ಟು ಸಾಧನೆ ಮಾಡಿದ್ದರು, ಶ್ರದ್ಧೆ ಮತ್ತು ಪ್ರಯೋಗ ಎಂಬೆರಡು ರಕ್ಕೆಗಳನ್ನು ಕೆದರಿ ಗೀತಾ ಗಗನದಲ್ಲಿ ಯಥಾಶಕ್ತಿ ವಿಹರಿಸಿದ್ದರು. ಮಹಾತ್ಮಾ ಗಾಂಧೀಜಿಯಂಥ ಸತ್ಯಾಗ್ರಹಿಯೂ ವಿನೋಬಾರನ್ನು ಗುರುಸಮಾನರೆಂದು ಭಾವಿಸಿದ್ದರು. ಗೀತೆಯಲ್ಲಿ ಬೋಧಿಸಿದ್ದ ಸ್ಥಿತಪ್ರಜ್ಞತೆಯನ್ನು ಪಡೆದವರಾಗಿದ್ದರು. ಆಧ್ಯಾತ್ಮಿಕವಾಗಿ ಸ್ವತಂತ್ರ ಮನೋವೃತ್ತಿಯುಳ್ಳವರಾಗಿದ್ದರು. ಆದ್ದರಿಂದಲೇ ತಮ್ಮ ಗೀತಾ ಪ್ರವಚನದ ಮೂಲಕ ಪ್ರಪಂಚದ ಎಲ್ಲ ಜನರಿಗೆ ನಿಜವಾದ ಬಿಡುಗಡೆಯ ಮಾರ್ಗ ತೋರಿಸಲು ಅವರಿಗೆ ಸಾಧ್ಯವಾಯಿತು.

"ಧರ್ಮ ಗ್ಲಾನಿಯಾದಾಗಲೆಲ್ಲಾ ದುಷ್ಟರನ್ನು ಶಿಕ್ಷಿಸುವುದಕ್ಕಾಗಿ ಶಿಷ್ಟರನ್ನು ರಕ್ಷಿಸುವುದಕ್ಕಾಗಿ ನಾನು ಅವತರಿಸುತ್ತೇನೆ" ಎಂಬುದಾಗಿ ಶ್ರೀಕೃಷ್ಣ

ಯುದ್ಧಭೂಮಿ ಕುರುಕ್ಷೇತ್ರದಲ್ಲಿ ಹೇಳಿದ. ಅದರಂತೆ ಅವನು ಬೇರೆ ಬೇರೆ ಯುಗಗಳಲ್ಲಿ ಧರ್ಮ ಗ್ಲಾನಿಯಾದಗಲೆಲ್ಲಾ ಮಾನವರೂಪದಲ್ಲಿ, ಪ್ರಾಣಿರೂಪದಲ್ಲಿ ಹತ್ತುಸಲ ಅವತರಿಸಿ ಆಯಾ ಯುಗದಲ್ಲಿ ಸಮಾಜ ಅನುಭವಿಸುತ್ತಿದ್ದ ಪೀಡೆಯನ್ನು ಪೂರ್ಣವಾಗಿಯಲ್ಲದಿದ್ದರೂ, ಮನುಷ್ಯ ನೆಮ್ಮದಿಯ ಉಸಿರು ಬಿಡುವಷ್ಟರ ಮಟ್ಟಿಗಾದರೂ ತಪ್ಪಿಸಿದ. ದ್ವಾಪರಯುಗದಲ್ಲಿ ಕೃಷ್ಣ ಸ್ವತಃ ಪ್ರತ್ಯಕ್ಷವಾಗಿ ಕಾಣಿಸಿಕೊಂಡು ದುಷ್ಟರಾಗಿದ್ದ ಕೌರವರನ್ನು ಶಿಕ್ಷಿಸಿ ಸಾಧು ಮನುಷ್ಯರಾಗಿದ್ದ ಪಾಂಡವರನ್ನು ರಕ್ಷಿಸಿದ. ಇದೆಲ್ಲವೂ ಭೌತಿಕ ಜಗತ್ತಿನಲ್ಲಿ ನಡೆಯಿತಾದರೂ ಕೃಷ್ಣ ಇದೇ ವೇಳೆಯಲ್ಲಿ ಅರ್ಜುನನಿಗೆ ಗೀತೆಯನ್ನು ಬೋಧಿಸುವುದರ ಮೂಲಕ ವೈಚಾರಿಕ ಕ್ಷೇತ್ರದಲ್ಲಿಯೂ ತನ್ನ ಅವತಾರವನ್ನು ಪ್ರಕಟಿಸಿ ಮಾನವ ಕುಲ ನಿಜವಾಗಿಯೂ ನಡೆಯಬೇಕಾದ ಮಾರ್ಗವನ್ನು ತೋರಿಸಿದ. ಯಾವಕಾಲಕ್ಕೂ, ಯಾವ ದೇಶಕ್ಕೂ, ಯಾವ ಜನರಿಗೂ ಅನ್ವಯಿಸುವಂಥಾ ಸನಾತನವಾದ ಸೂತ್ರಗಳನ್ನು ಜಗತ್ತಿಗೆ ಕೊಟ್ಟ ಮತ್ತು ಐದು ಸಾವಿರ ವರ್ಷಗಳಷ್ಟು ಹಿಂದೆ ನಮ್ಮೀ ಜಗತ್ತಿನಲ್ಲಿ ಮೊಟ್ಟ ಮೊದಲ ಬಾರಿಗೆ ಗೀತೆಯ ಮೂಲಕ ವಿಚಾರ ಕ್ರಾಂತಿಯನ್ನು ಮಾಡಿದ. ದುಷ್ಟರ ನಿಗ್ರಹಕ್ಕಾಗಿ ಮಾನವರೂಪದ ಅವತರಣಿಕೆಗಿಂತ ಸದ್ವಿಚಾರದ ಪ್ರಚಾರ ಹೆಚ್ಚು ಪರಿಣಾಮಕಾರಿ ಮತ್ತು ಶಾಶ್ವತವೆಂಬುದನ್ನು ಜಗತ್ತಿಗೆ ತೋರಿಸಿದ. ಅಂದಿನಿಂದ ಪ್ರಾರಂಭವಾದ ವೈಚಾರಿಕ ಕ್ರಾಂತಿ ಜಗತ್ತಿನ ವಿವಿಧ ದೇಶಗಳಲ್ಲಿ ವಿವಿಧ ಕಾಲಘಟ್ಟಗಳಲ್ಲಿ ನಡೆದುಕೊಂಡೇ ಬಂದಿದೆ. ವೈಚಾರಿಕ ಕ್ರಾಂತಿಯ ಓಘ ಇನ್ನೂ ಪ್ರತ್ಯಕ್ಷವಾಗಿದೆ. ಅನಾಗರೀಕತೆಯಿಂದ ನಾಗರೀಕತೆಯತ್ತ ಸಾಗಿಬಂದಿರುವ ಮನುಷ್ಯನ ಪ್ರಗತಿಗೆ ಮುಖ್ಯಕಾರಣ ಅವನ ಮನಸ್ಸಿನಲ್ಲಾದ ವೈಚಾರಿಕ ಕ್ರಾಂತಿ. ಮನುಷ್ಯನ ಮನಸ್ಸಿನಲ್ಲಿ ವೈಚಾರಿಕ ಬದಲಾವಣೆಯಾಗದೇ ಹೋಗಿದ್ದರೆ ಅವನು ಇಂದಿಗೂ ಪಶುವಿನಂತೆಯೇ ಜೀವನ ನಡೆಸುತ್ತಿದ್ದ. ಎರಡು ಸಾವಿರ ವರ್ಷಗಳ ಹಿಂದೆ ಏಸುವಿನ ಕಾರಣದಿಂದಾಗಿ ಬೈಬಲ್ ಬಂದಿತು. ಬೈಬಲ್ ಸಹ ಭಗವದ್ಗೀತೆಯಂತೆ ಮನಷ್ಯನಲ್ಲಿ ವೈಚಾರಿಕ ಬದಲಾವಣೆಯನ್ನು ತಂದಿತು. ಒಂದೂವರೆ ಸಾವಿರ ವರ್ಷಗಳ ಹಿಂದೆ ಖುರಾನ್ ಬಂದಿತು. ಇದು ಸಹ ವೈಚಾರಿಕ ಬದಲಾವಣೆಯನ್ನು ತಂದಿತು. ಆನಂತರ ಬಂದ ದಮ್ಮಪದ, ಗ್ರಂಥ ಸಾಹೀಬ, ಜೈನ ಗ್ರಂಥಗಳು ವೈಚಾರಿಕ ಬದಲಾವಣೆಯನ್ನು ತಂದವು. ಮುಂದೆ ಎಲ್ಲ ಧರ್ಮಗಳಲ್ಲಿಯೂ ಉದ್ಗ್ರಂಥಗಳೂ, ವೈಚಾರಿಕ ಸಾಹಿತ್ಯವೂ ರಚಿತವಾದವು. ಹೀಗೆ ರಚಿತವಾದ ವೈಚಾರಿಕ ಗ್ರಂಥಗಳಿಂದ ಆಯಾಕಾಲಕ್ಕೆ ಅಗತ್ಯವಾಗಿದ್ದ ಸಾಮಾಜಿಕ ಮತ್ತು ರಾಜಕೀಯ ಕ್ರಾಂತಿಗಳಾದುದೂ ಉಂಟು.

ಜಗತ್ತಿನ ಎಲ್ಲ ಮಹಾಗ್ರಂಥಗಳ ರಚನೆ ಕರ್ಮಕ್ಷೇತ್ರದಲ್ಲಿಯೇ ಆಗಿದೆ. ಅದರಂತೆ ಗೀತೆ ಕೂಡ. ಹಾಗೆಯೇ ವಿನೋಬಾರ ಗೀತಾ ಪ್ರವಚನ ಕೂಡಾ.

ಉಪ್ಪಿನ ಸತ್ಯಾಗ್ರಹದ ಸಂದರ್ಭದಲ್ಲಿ ಗಾಂಧೀಜಿಯವರು ಏಕವ್ಯಕ್ತಿ ಪ್ರಧಾನ ಸತ್ಯಾಗ್ರಹದ ತಂತ್ರವನ್ನು ಹೂಡಿದರು. ಪ್ರತಿದಿನ ಒಬ್ಬರು ಮಾತ್ರ ಸತ್ಯಾಗ್ರಹ ಮಾಡುತ್ತಾ ಹೋಗಬೇಕು ಎಂಬುದು ಈ ತಂತ್ರದ ಸೂತ್ರ. ಏಕವ್ಯಕ್ತಿಯಾಧಾರಿತ ಸತ್ಯಾಗ್ರಹದ ಈ ಸರಣಿಗೆ ಮೊದಲನೇ ಸತ್ಯಾಗ್ರಹಿಯನ್ನಾಗಿ ಗಾಂಧೀಜಿ ಯಾರನ್ನು ಆರಿಸುತ್ತಾರೆಂಬ ಬಗ್ಗೆ ಇಡೀ ದೇಶ ಹಾಗೂ ಇಂಗ್ಲಿಷ್ ಸರ್ಕಾರ ಬಹು ಕುತೂಹಲಿಯಾಗಿದ್ದವು. ಎಲ್ಲರ ನಿರೀಕ್ಷೆ ನೆಹರೂರವರೆಂದೇ ಇತ್ತು. ಆದರೆ ಗಾಂಧೀಜಿ ಆರಿಸಿದ ವ್ಯಕ್ತಿ ವಿನೋಬಾ. ಏಕೆಂದರೆ ಗಾಂಧೀಜಿಯವರ ಸಿದ್ಧಾಂತದ ಪ್ರಕಾರ ಗುರಿ ಶುದ್ಧವಾಗಿದ್ದರೆ ಸಾಧನವೂ ಶುದ್ಧವಾಗಿರಬೇಕು. ಆದ್ದರಿಂದ ಏಕ ವ್ಯಕ್ತಿ ಆಧಾರಿತ ಸತ್ಯಾಗ್ರಹ ಅಪೇಕ್ಷಿತ ಪರಿಣಾಮವನ್ನುಂಟು ಮಾಡಬೇಕಾದರೆ ಸತ್ಯಾಗ್ರಹಿಯೂ ಅಷ್ಟೇ ದೊಡ್ಡ ಸಾಧಕನಾಗಿರಬೇಕು. ಈ ಸೂತ್ರದನ್ವಯ ಪ್ರಥಮ ಸತ್ಯಾಗ್ರಹಿಯ ಗೌರವ ವಿನೋಬಾರವರಿಗೆ ಸಂದಿತು. ಇದರೊಂದಿಗೆ ಅವರು ಕಾರಾಗೃಹವಾಸವನ್ನೂ ಅನುಭವಿಸಬೇಕಾಯಿತು. ಹೀಗೆ ಗೀತಾ ಪ್ರವಚನ ಗೀತೆಯಂತೆ ಕರ್ಮಭೂಮಿಯಲ್ಲೇ ಜನ್ಮ ತಾಳಿತು.

ಇಂದು ಗೀತಾ ಪ್ರವಚನ ಅಮೃತ ಮಹೋತ್ಸವದ ಆಚರಣೆ ಸಕಾಲಿಕವಾಗಿ ನಡೆಯುತ್ತಿದೆ. ಆಧುನಿಕ ಯುಗ ಹಣದ ಯುಗವಾಗಿದೆ. ಹಣವೆಂಬುದು ಅಸುರೀ ಶಕ್ತಿಯಾಗಿ ಪರಿಣಮಿಸಿದೆ. ಹಣದ ಶಕ್ತಿಯೊಂದಿಗೆ ಹಿಂಸಾಶಕ್ತಿ ಸಮ್ಮಿಳಿತಗೊಂಡಿದೆ. ಕಾಮ, ಕ್ರೋಧ, ಲೋಭ, ಮೋಹಗಳೂ ಸೇರಿಕೊಂಡಿವೆ. ವಿಚಾರ ಕ್ರಾಂತಿಯನ್ನು ತಂದ ಗ್ರಂಥಗಳೇ ಇಂದು ಮನುಷ್ಯನ ವಿಚಾರ ಶಕ್ತಿಯ ದುರುಪಯೋಗವಾಗುವುದಕ್ಕೆ ಕಾರಣಗಳಾಗುತ್ತಿವೆ. ಕರ್ಮಕಾಂಡತೆ ಹೆಚ್ಚಾಗುತ್ತಿದೆ. ವಿಜ್ಞಾನಕ್ಕಾಗಿ ವಿಜ್ಞಾನದ ಮುನ್ನಡೆಯಾಗುತ್ತಿದೆ. ತಂತ್ರಜ್ಞಾನ ಅಮಾನವೀಯವಾಗಿ ಕಾರ್ಯರಂಗಕ್ಕೆ ಇಳಿದಿದೆ. ವಿಶ್ವ ಒಂದು ಗ್ರಾಮವಾಗುತ್ತಿದೆ ಎಂದು ಹೇಳುತ್ತಲೇ ಚಿಕ್ಕ ಮಕ್ಕಳು ಕತ್ತರಿ ಹಿಡಿದು ಬಟ್ಟೆಯನ್ನು ಕತ್ತರಿಸುವಂತೆ ಸ್ವಾರ್ಥವೆಂಬ ಕತ್ತರಿ ಹಿಡಿದು ವಿಶ್ವಾತ್ಮವನ್ನು ತುಂಡು ತುಂಡಾಗಿ ಕತ್ತರಿಸುತ್ತಿದ್ದೇವೆ. ವಿನೋಬಾ ಹೇಳಿದ್ದಾರೆ; "ನಮ್ಮ ನಮ್ಮ ಆತ್ಮ ವ್ಯಾಪಕವಾಗಲು ಸದಾ ಚಡಪಡಿಸುತ್ತಿರುತ್ತದೆ ಅದಕ್ಕೆ ಇಡೀ ಜಗತ್ತನ್ನೇ ಹಬ್ಬಿಕೊಳ್ಳಬೇಕೆಂಬ ಬಯಕೆಯಿರುತ್ತದೆ. ಆದರೆ ನಾವು ಅದನ್ನು ಕಟ್ಟಿ ಹಾಕುತ್ತೇವೆ, ಸೆರೆ ಹಾಕಿದ್ದೇವೆ. ನಮಗೆ ಅದರ ನೆನಪೇ ಆಗದು. ಮುಂಜಾನೆಯಿಂದ ಸಂಜೆಯ

ತನಕ ದೇಹ ಸೇವೆಯೇ. ಈ ಮೈ ಎಷ್ಟು ಬಲಿಯಿತು, ಎಷ್ಟು ಸೊರಗಿತು ಎಂಬುದೇ ನಮ್ಮ ಚಿಂತೆ. ಬೇರಾವುದರಲ್ಲೂ ಆನಂದವಿಲ್ಲವೆಂಬಂತೆ".

ವಿಶ್ವದ ಇಂದಿನ ಅರ್ಥಶಾಸ್ತ್ರದ ಸೂತ್ರ ಅಪರಿಮಿತತನ. ದೇಶಗಳು ಎಷ್ಟೆಷ್ಟು ಅಪರಿಮಿತತನವನ್ನು ಬೆಳೆಸಿಕೊಳ್ಳುತ್ತವೋ ಅಷ್ಟಷ್ಟು ಅವು ಬಲಶಾಲಿಯಾಗಬಲ್ಲವು ಎಂಬ ಗ್ರಹಿಕೆ ಬಲವಾಗಿದೆ ಆದ್ದರಿಂದಲೇ ವಿಶ್ವಸಂಸ್ಥೆ ಶೂನ್ಯವಾಗಿದೆ. ಅಮೇರಿಕಾ ಅಪರಿಮಿತತೆಯ ಶಕ್ತಿಯನ್ನು ಹೆಚ್ಚಾಗಿ ಬೆಳೆಸಿಕೊಂಡಿರುವುದರಿಂದ ಅದು ಒಂದು ವಿಶ್ವಶಕ್ತಿಯಾಗಿದೆ. ಅಂಥ ಶಕ್ತಿಯನ್ನು ಇನ್ನೂ ಹೆಚ್ಚಾಗಿ ಬೆಳಸಿಕೊಳ್ಳದೇ ಇರುವ ಭಾರತ ದುರ್ಬಲವಾಗಿದೆ. ವಿಶ್ವದಲ್ಲೆಲ್ಲಾ ಜೀವನದ ಪ್ರತಿಯೊಂದು ರಂಗದಲ್ಲೂ ಅಸಮಾನತೆ ಉಂಟಾಗಿದೆ. ಅದರಿಂದಾಗಿ ಎಲ್ಲೆಲ್ಲೂ ಪ್ರಾದೇಶಿಕ ಯುದ್ಧಗಳು ನಡೆಯುತ್ತಲೇ ಇವೆ. ಮಹಾ ಯುದ್ಧದ ಕತ್ತಿ ವಿಶ್ವ ನೆತ್ತಿಯಮೇಲೆ ಸದಾ ತೂಗುತ್ತಲೇ ಇದೆ. ಆದ್ದರಿಂದ ವಿನೋಬಾ ಗೀತಾ ಪ್ರವಚನದಲ್ಲಿ ಬಾಳಿನಲ್ಲಿ ಅಪರಿಮಿತತೆಯ ಅಗತ್ಯವನ್ನು ಒತ್ತಾಗಿ ಹೇಳಿದ್ದಾರೆ. ಪರಿಮಿತತನವೆಂದರೆ ನಿಯಮಿತ ಆಚರಣೆ ಎಂದು ಸೂತ್ರಬದ್ಧವಾಗಿ ಹೇಳಿದ್ದಾರೆ. ತನ್ಮೂಲಕ ಲೌಕಿಕರ ಬಿಡುಗಡೆ ಹಾಗೂ ವಿಶ್ವಶಾಂತಿಯ ಮಾರ್ಗವನ್ನೂ ಸೂಚಿಸಿದ್ದಾರೆ. ಮುಂದೆ ೧೯ ವರ್ಷಗಳ ನಂತರ ವಿನೋಬಾ ಪುನಃ ಕರ್ಮಕ್ಷೇತ್ರಕ್ಕೆ ಧುಮುಕಿದರು. ೧೯೫೧ ರಿಂದ ಭೂದಾನ ಆಂದೋಲನ ಪ್ರಾರಂಭಿಸಿದರು. ಇಡೀ ಭಾರತ ದೇಶವನ್ನು ಕಾಲ್ನಡಿಗೆಯಲ್ಲಿ ೧೯೫೭ರ ವರೆಗೆ ಸುತ್ತಿದರು. ಈ ಅವಧಿಯಲ್ಲಿ ಅವರು ಸುಮಾರು ಏಳುಸಾವಿರದ ಐದುನೂರು ಕಿ.ಮೀ. ನಡೆದರು ಮತ್ತು ಐವತ್ತು ಲಕ್ಷ ಎಕರೆ ಭೂಮಿಯನ್ನು ದಾನವಾಗಿ ಪಡೆದು ಲಕ್ಷಾವಧಿ ಭೂಹೀನರಿಗೆ ಈ ಭೂಮಿಯನ್ನು ಹಂಚಿಸಿದರು. ಗ್ರಾಮೀಣ ಜನರಿಗೆ ಗೀತೆಯ ಸಂದೇಶವನ್ನೂ ತಲುಪಿಸಿದರು. ಹೀಗೆ ವಿನೋಬಾ ಏಕಕಾಲಕ್ಕೆ ಗ್ರಾಮೀಣರ ಆರ್ಥಿಕ ಮತ್ತು ಆಧ್ಯಾತ್ಮಿಕ ಬಿಡುಗಡೆಗಾಗಿ ಪ್ರಯತ್ನಿಸಿ ಭಾರತ ದೇಶ ಜನ್ಮವಿತ್ತ ಅದ್ವಿತೀಯ ನಾಯಕರಲ್ಲಿ ಒಬ್ಬರಾದರು. ಕರ್ನಾಟಕದಲ್ಲಿ ಯಾತ್ರೆ ಮಾಡುತ್ತಿದ್ದಾಗ ಜೈಜಗತ್ ಎಂಬ ಘೋಷಣೆಯನ್ನೂ ವಿಶ್ವಕ್ಕೆ ಕೊಟ್ಟರು. ಮರಾಠಿ ಭಾಷೆಯ ಹಿರಿಯ ಸಾಹಿತಿ ಸಾನೆ ಗುರೂಜಿ ಸಹ ಕೈದಿಗಳಲ್ಲಿ ಒಬ್ಬರಾಗಿದ್ದರು. ಅವರು ವಿನೋಬಾರ ಪ್ರವಚನಗಳನ್ನು ಬರೆದುಕೊಂಡು ಜಗತ್ತಿಗೆ ಕೊಟ್ಟರು. ಸಹೃದಯರ ಸಮಾಜ ಸಾನೆ ಗುರೂಜಿಯವರಿಗೆ ಆಭಾರಿಯಾಗಿದೆ.

* * *

ನರ್ಮದಾ ಉಳಿಸಿ ಆಂದೋಲನ ಒಂದು ಆತ್ಮಾವಲೋಕನ

–ಮೇಧಾ ಪಾಟ್ಕರ್

(ಕಳೆದ ಎರಡು ದಶಕಗಳಿಂದ ಬೃಹತ್ ಅಣೆಕಟ್ಟುಗಳ ವಿರುದ್ಧ ಜನಾಂದೋಲನ ನಡೆಸುತ್ತಿರುವ ಹಿರಿಯ ಪರಿಸರವಾದಿ ಮೇಧಾ ಪಾಟ್ಕರ್‌ರವರೊಂದಿಗೆ ನಡೆಸಲಾದ ಸಂದರ್ಶನ. ಸಂದರ್ಶಕರು: ಗಾರ್ಗಿಪಾರ್ಸೈ)

ಇಪ್ಪತ್ತು ವರ್ಷಗಳ ಹೋರಾಟದ ಸಫಲತೆ ವಿಫಲತೆಗಳಾವುವು?

ಇಪ್ಪತ್ತು ವರ್ಷಗಳ ನಂತರವೂ ನಾವು ಕ್ರಿಯಾಶೀಲರಾಗಿಯೇ ಬದುಕುಳಿದಿದ್ದೇವೆ! ಮಾನವಹಕ್ಕುಗಳ ಮೂಲಭೂತ ಮೌಲ್ಯಗಳ ಬಗ್ಗೆ ಬದ್ಧತೆಯನ್ನಿಟ್ಟುಕೊಂಡು ಯಾವುದೇ ರೀತಿಯ ಒಪ್ಪಂದ ಮಾಡಿಕೊಳ್ಳದೆ ಜಾಗರೂಕರಾಗಿ ಉಳಿದಿದ್ದೇವೆ. ರಾಷ್ಟ್ರೀಯ ಜನಾಂದೋಲನಗಳ ಸಂಘಟನೆಯ ಮೂಲಕ(ಎನ್.ಎ.ಪಿ.ಎಮ್) ಬೆಳೆದಿದ್ದೇವೆ ಮತ್ತು ವಿಸ್ತರಿಸಿಕೊಂಡಿದ್ದೇವೆ. "ನರ್ಮದಾ ಉಳಿಸಿ" ಆಂದೋಲನದ ಮೂಲಕ ಎತ್ತಿಕೊಳ್ಳಲಾದ ವಿಷಯಗಳು ಅನೇಕ ಚಳುವಳಿಗಳಾಗಿಯೂ ಹೊರಹೊಮ್ಮಿವೆ. ನರ್ಮದಾ ಯೋಜನೆಯಿಂದ ವಿಶ್ವ ಬ್ಯಾಂಕ್ ತನ್ನನ್ನು ಹಿಂದೆಗೆದುಕೊಳ್ಳುವಂತೆ ಮಾಡಿದ ಮೇಲಂತೂ ಅಣೆಕಟ್ಟು ಕುರಿತಾದ ವಿಶ್ವ ಆಯೋಗದ ಕಾರ್ಯವಿಧಾನದಲ್ಲಿ ಬಹಳಷ್ಟು ಬದಲಾವಣೆಯಾಗಿದೆ. ಆ ಆಯೊಗದ ವರದಿಯ ಕಾರಣದಿಂದಾಗಿ ಭಾರತವೂ ಸೇರಿದಂತೆ ವಿವಿಧ ದೇಶಗಳಲ್ಲಿ ನಿರ್ಮಾಣಗೊಳ್ಳುತ್ತಿರುವ ಅಣೆಕಟ್ಟುಗಳಿಗೆ ಸಂಬಂಧಿಸಿದ ವಿಷಯ ಮರುವಿಮರ್ಶೆಗೆ ಒಳಪಡುವಂತಾಗಿದೆ.

ಆದರೆ ಇದಕ್ಕಿಂತಲೂ ಮುಖ್ಯವಾದ ಸಾಧನೆ ಏನೆಂದರೆ ಜನಸಾಮಾನ್ಯರನ್ನು ಸಬಲೀಕರಣಗೊಳಿಸಿದ್ದಾಗಿದೆ. ಇದು ಕೇವಲ ನರ್ಮದಾ ಕಣಿವೆಯಲ್ಲಿಯ ಜನರಿಗಷ್ಟೆ ಮಾತ್ರ ಸೀಮಿತಗೊಂಡಿರದೆ ಅಣೆಕಟ್ಟುಗಳಿಂದ ಅಥವಾ ನದಿ ಜೋಡಣೆಯಿಂದ ಒಳಗಾಗುವ ಜನರಲ್ಲಿಯೂ ಸಹ ಉತ್ತಮ ಜಾಗೃತಿ ಕಂಡು ಬರುತ್ತಿದೆ. ಸರ್ಕಾರ ಆಮಿಷ ಒಡ್ಡುತ್ತಿದ್ದರೂ, ಹೆದರಿಸುತ್ತಿದ್ದರೂ ಜನ ಓಡಿಹೋಗಿಲ್ಲ. ನಾವು ನಮ್ಮ ಅಳತೆಗೋಲನ್ನು ಬದಲಾಯಿಸಿಲ್ಲ. ಸರ್ಕಾರದ ಅಳತೆಗೋಲನ್ನು ಬದಲಾಯಿಸಬೇಕೆಂಬುದೆ ನಮ್ಮ ಗುರಿಯಾಗಿದೆ. ಆ ನಿಟ್ಟಿನಲ್ಲಿ ನಾವು ಬಹಳಷ್ಟು ವ್ಯತ್ಯಾಸ ತರಲು ಸಮರ್ಥರಾಗಿದ್ದೇವೆ.

ಅಣೆಕಟ್ಟೆಗಾಗಿ ಬಹಳಷ್ಟು ಹಣವನ್ನು ಖರ್ಚುಮಾಡಲಾಗಿದೆಯಲ್ಲ........

ನೇಣು ಹಗ್ಗ ಸಿದ್ಧವಾಗಿದ್ದರೂ ಕುತ್ತಿಗೆ ಹೊರಗೆ ಇದೆಯೆಂದು ನಾವು

ಹೇಳುತ್ತಲೇ ಬಂದಿದ್ದೇವೆ. ಈಗಲೂ ಸಹ ಕಾಲ ಮಿಂಚಿಲ್ಲ. ನರ್ಮದಾ ಅಣೆಕಟ್ಟಿನ ಇಡೀ ಯೋಜನೆಯನ್ನೇ ಈಗಲೂ ಪುನರ್ವಿಮರ್ಶಿಸಬಹುದು. ೨೦,೦೦೦ ಕೋಟಿ ಹಣವನ್ನು ಖರ್ಚುಮಾಡಿದ ನಂತರವೂ, ೧೧,೦೦೦ ಹೆಕ್ಟರ್ ಭೂಮಿಯನ್ನು ಮುಳುಗಡೆ ಮಾಡಿಸಿದ ನಂತರವೂ ಈ ೧೧,೦೦೦ ಹೆಕ್ಟರ್‌ನಲ್ಲಿ ಈಗಾಗಲೆ ೬,೦೦೦ ಹೆಕ್ಟರ್ ಭೂಮಿಗೆ ದಕ್ಕೆ ಒದಗಿದ ನಂತರವೂ ಅಣೆಕಟ್ಟಿನಿಂದ ದೊರೆಯಬಹುದೆಂದು ನಿರೀಕ್ಷಿಸಲಾಗಿದ್ದ ಅನುಕೂಲತೆಗಳು ನಿಜಗೊಂಡಿಲ್ಲ. ಪ್ರಯೋಜನಗಳೆಲ್ಲವು ಸಮಾಜದ ಎಲ್ಲ ಜನರಿಗೆ ಸಮಾನವಾಗಿ ದೊರೆಯುತ್ತದೆಂಬ ವಿಷಯದಲ್ಲಂತೂ ಬಹಳಷ್ಟು ಗೊಂದಲವೇ ಇದೆ. ಹೂಡಿರುವ ಬಂಡವಾಳ ಮತ್ತು ದೊರೆಯುವ ಲಾಭ ಇವುಗಳ ಮಧ್ಯದ ಸರಾಸರಿ ಪ್ರಮಾಣ ಶೇ೫೦ ರಷ್ಟಿದೆ. ಯೋಜನೆಯ ಒಟ್ಟು ಬೆಲೆ ಸರ್ಕಾರದಿಂದ ಅಂದಾಜು ಮಾಡಲ್ಪಟ್ಟಿರುವ ಪ್ರಕಾರ ೪೦,೦೦೦ ಕೋಟಿ. ಇನ್ನೂ ಹೆಚ್ಚಿನ ಹಣವನ್ನು ಈ ಯೋಜನೆಯಲ್ಲಿ ತೊಡಗಿಸುವ ಮುನ್ನ ಪುನರ್‌ಪರಿಶೀಲನೆ ಮಾಡಬೇಕಿದೆ.

ನರ್ಮದಾ ಯೋಜನೆಯ ಕಾರಣದಿಂದ ಬಹಿರಂಗಕ್ಕೆ ಬಂದ ವಿಷಯಗಳು ಯಾವುವು?

ನರ್ಮದಾ ಉಳಿಸಿ ಆಂದೋಲನದ ಹೋರಾಟಗಾರರು ಮತ್ತು ನರ್ಮದಾ ಕಣಿವೆಯಲ್ಲಿರುವ ಜನರು ಇವರ ಮಧ್ಯೆ ಸಂವಾದ ಪ್ರಾರಂಭವಾದ ಮೇಲೆ ಜನರು ಮಾಹಿತಿ ಹಕ್ಕನ್ನು ಪಡೆದಿಲ್ಲವೆಂಬುದೂ ಮತ್ತು ನೀರಿನ ಮೇಲಿನ ತಮ್ಮ ಹಕ್ಕುನ್ನು ಮಾನ್ಯಮಾಡಲ್ಪಟ್ಟಿಲ್ಲವೆಂಬುದೂ ಗೊತ್ತಾಯಿತು. ಇದಾದದ್ದು ನರ್ಮದಾ ನೀರು ವಿವಾದ ಪಂಚಾಯಿತಿ ಪ್ರಾರಂಭವಾದ ೧೦ ವರ್ಷಗಳ ನಂತರ. ಆದಾಗ್ಯೂ ಜನರಿಗೆ ಯಾವ ವಿಷಯವನ್ನು ಹೇಳಿರಲಿಲ್ಲ ಅಥವಾ ಅವರೊಂದಿಗೆ ಪರಾಮರ್ಶ ಮಾಡಿರಲಿಲ್ಲ ಆದ್ದರಿಂದ ನಮ್ಮ ಮೊದಲ ವಿಷಯ ಮಾಹಿತಿಯ ಹಕ್ಕನ್ನು ಪಡೆಯುವುದಾಗಿತ್ತು. ಇದರ ವಿವರಗಳನ್ನು ನಾವು ೧೯೮೫-೮೬ನೇ ಸಾಲಿನಲ್ಲಿ ತಯಾರಿಸಿದ್ದ ೨೬ ಅಂಶಗಳ ಬೇಡಿಕಾಪತ್ರದಲ್ಲಿಯೂ ಕಾಣಿಸಿದ್ದೆವು. ಈ ಬೇಡಿಕಾಪತ್ರದ ಮೂಲಕ ನಾವು ಸಂಬಂಧಪಟ್ಟ ಜನರಿಗೆ ಮಾಹಿತಿ ಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದ್ದೇವೆ.

ಅಣೆಕಟ್ಟಿನಿಂದ ಉಂಟಾಗಬುಹುದಾದ ಪರಿಣಾಮದ ಅಂದಾಜನ್ನು ಗೊತ್ತುಮಾಡಬೇಕೆಂದೂ ನಾವು ಕೇಳಿದ್ದವು. ಈ ಪರಿಣಾಮದಲ್ಲಿ ಉದ್ಭವಿಸುವ ಸಾಮಾಜಿಕ ಸಮಸ್ಯೆಯನ್ನೂ ಒಳಪಡಿಸಬೇಕೆಂದು ಕೋರಿದ್ದೆವು. ನದಿಯ ಮೇಲ್ಭಾಗದಲ್ಲಿ, ಕೆಳಭಾಗದಲ್ಲಿ ಮತ್ತು ನೀರು ಸಂಗ್ರಹವಾಗುವ ಪ್ರದೇಶದಿಂದ ಎಷ್ಟು ಜನ ಉಚ್ಚಾಟಿತಗೊಳ್ಳುತ್ತಾರೆ ಎಂಬುದನ್ನು ಸಹ ಅಂದಾಜು ಮಾಡಿರಲಿಲ್ಲ. ದೊಡ್ಡ ಅಣೆಕಟ್ಟಿನ ನಿರ್ಮಾಣದಿಂದ ಉಂಟಾಗುವ ಕಣಿವೆಯ ವಿವಿಧ ವಿಭಾಗಗಳಲ್ಲಿಯ ಸಮಸ್ಯೆಗಳನ್ನೂ ಗಮನಕ್ಕೆ ತೆಗೆದುಕೊಂಡಿರಲಿಲ್ಲ.

ನಾವು ಇಡೀ ಯೋಜನೆಯನ್ನೆ ಅಲ್ಲದೆ ಆ ಕುರಿತು ತೀರ್ಮಾನ ಕೈಗೊಳ್ಳುವ ಪ್ರಕ್ರಿಯೆಯನ್ನೂ ಸಹ ಪ್ರಶ್ನಿಸಿದೆವು ಈ ಅಣೆಕಟ್ಟಿನ ಪ್ರಭಾವಕ್ಕೆ ಒಳಗಾಗುವ ಆದಿವಾಸಿಗಳಲ್ಲದೆ ಬೇರೆ ಪ್ರತಿಯೊಂದು ಸಮುದಾಯವೂ ಅಣೆಕಟ್ಟಿನ ನಿರ್ಮಾಣಕ್ಕೆ ಒಂದು ರೀತಿಯ ಬಂಡವಾಳವಾಗಿದ್ದರು. ಅಂಥವರನ್ನು ಕಷ್ಟಕ್ಕೀಡಾದ ಜನವೆಂದು ಅವರನ್ನು ಪರಿಗಣಿಸಿ ಅವರಿಗೆ ಆದ್ಯತೆಯ ಮೇರೆಗೆ ಮೂಲಭೂತವಾಗಿ ಕೊಡಬೇಕಾದ ಸೌಲಭ್ಯಗಳನ್ನು ಕೊಡುವುದರ ಬದಲಾಗಿ ಆ ಸಮುದಾಯ ಹೊಂದಿರುವುದನ್ನೇ ಕಿತ್ತುಕೊಳ್ಳುವ ಹುನ್ನಾರ ನಡೆಯುತ್ತಿತ್ತು! ವಿಶ್ವಬ್ಯಾಂಕ್ ನಿರ್ವಹಿಸುತ್ತಿರುವ ಪಾತ್ರದ ಮೇಲೆಯೂ ನಾವು ಗಮನ ಹರಿಸಿದೆವು. ಈ ಯೋಜನೆಯಲ್ಲಿ ವಿಶ್ವಬ್ಯಾಂಕ್ ಪ್ರವೇಶಿಸಿ ಯೋಜನೆಯ ಒಟ್ಟು ಖರ್ಚಿನಲ್ಲಿ ಶೇ೫ ರಷ್ಟು ಹಣವನ್ನು ಕೊಟ್ಟ ಕೂಡಲೆ ಅಣೆಕಟ್ಟು ನಿರ್ಮಾಣವಾದಂತೆಯೆ ಎಂಬ ಮಾತು ಸಿದ್ಧವಾಯಿತು. ಆದರೆ ವಿಶ್ವಬ್ಯಾಂಕ್‌ಗೆ ತನ್ನ ನೀತಿಗಳು ಅನುಸರಿಸಲ್ಪಟ್ಟಿವಿಯೇ ಅಥವಾ ಸ್ಥಳೀಯ ಕಾನೂನುಗಳ ಪಾಲನೆಯಾದರೂ ಆಯಿತೆ ಎಂಬುದನ್ನು ವಿಶ್ವಬ್ಯಾಂಕ್ ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಇಂಥ ಸಂದರ್ಭದಲ್ಲಿ ವಿಶ್ವಬ್ಯಾಂಕ್ ಈ ಯೋಜನೆಯಿಂದಲೂ ಮತ್ತು ನರ್ಮದಾ ಕಣಿವೆಯಿಂದಲೂ ಹಿಂದಕ್ಕೆ ಹೋಗುವಂತೆ ಒತ್ತಾಯಿಸಲು ನಮಗೆ ಸಾಧ್ಯವಾಯಿತು. ಅಲ್ಲದೆ ಚಿಕ್ಕಪ್ರಮಾಣದ ಜಲ ಹಾಗೂ ಅನಿಲ ವಿದ್ಯುತ್ ಉತ್ಪಾದನಾ ಘಟಕಗಳಿಗೆ ಪರ್ಯಾಯದ ವಿಷಯ ಮತ್ತು ಅಭಿವೃದ್ಧಿ ಕುರಿತಾದ ಅಳತೆಗೋಲಿನ ಬಗ್ಗೆಯೂ ಪ್ರಶ್ನೆ ಎತ್ತಿದೆವು.

ಈಗ ವಿಶ್ವಬ್ಯಾಂಕ್ ಜಲವಿಭಾಗಕ್ಕೆ ತನ್ನ ಸಾಲದ ಅಂಶವನ್ನು ಪ್ರತಿವರ್ಷವೂ ೨೦೦ ದಶಲಕ್ಷ ಡಾಲರ್‌ನಿಂದ ೮೦೦ ದ ಶ ಲ ಕ್ಷ ಡಾಲರ್‌ನವರೆಗೆ ಏರಿಸಬೇಕೆಂದು ಸೂಚಿಸಿದೆಯಲ್ಲ......

ಈಗ ನಿಜವಾಗಿಯೂ ವಿಶ್ವಬ್ಯಾಂಕ್ ಮೋಸ ಮಾಡುತ್ತಿದೆ. ಏಕೆಂದರೆ ಓರ್ವ ದಳ್ಳಾಳಿಯಂತೆ ತನ್ನ ಪಾತ್ರವನ್ನು ನಿರ್ವಹಿಸುತ್ತಿದೆ. ಬ್ರಿಟಿಷರ ಕಾಲದಲ್ಲಿದ್ದ ಭೂಸ್ವಾಧೀನ ಕಾಯ್ದೆಯ ಮೂಲಕ ಸರ್ಕಾರ ಭೂಮಿಯನ್ನು ಆಕ್ರಮಿಸಿಕೊಳ್ಳುತ್ತಿದೆ. ಹೊಸ ಹೊಸ ಸರ್ಕಾರಿ ಆದೇಶಗಳನ್ನು ಜಾರಿಗೆ ತರುವುದರ ಮೂಲಕ ಮತ್ತು ಬೃಹತ್ ಯೋಜನೆಗಳನ್ನು ಜಾರಿಗೊಳಿಸುವುದರ ಮೂಲಕ ಇದು ದೈತ್ಯಾಕಾರದ ಯೋಜನೆಗಳೊಂದಿಗೆ ಕಾಣಬರುವ ರೋಗವೂ ಏನೋ ಎಂಬಂತೆ ಬಿಂಬಿಸುತ್ತಿದೆ. ಬಾಕ್ರಾನಂಗಲ್ ಅಣೆಕಟ್ಟನ್ನು ಕಟ್ಟಿದ ಮೂರುವರ್ಷಗಳ ತರುವಾಯ ನೆಹರೂ ಹೇಳಿದ್ದ ಮಾತನ್ನು ಈಗ ಯಾರೂ ಪುನರುಚ್ಚಿಸುವುದಿಲ್ಲ. ಸರ್ಕಾರವು ಜನರಿಂದ ಅಣೆಕಟ್ಟೆಯ ದುಷ್ಪರಿಣಾಮಗಳನ್ನು ಹಾಗೂ ದೀರ್ಘಕಾಲದ ನಂತರ ಉಂಟಾಗುವ ಪರಿಣಾಮಗಳನ್ನು ಮುಚ್ಚಿಡುತ್ತಿದೆ. ಈಗ ಸರ್ಕಾರವು ದೊಡ್ಡ ಅಣೆಕಟ್ಟುಗಳನ್ನು ಮತ್ತು ನೀರು ಸರಬರಾಜು ಯೋಜನೆಯನ್ನು ನಗರದ ಮೂಲ ಸೌಲಭ್ಯಗಳ

ವಿಷಯವೆಂದು ಪರಿಗಣಿಸಿದೆ. ಈಗ ಆಟದಲ್ಲಿ ವಿಶ್ವಬ್ಯಾಂಕೇ ನಿಜವಾದ ಪ್ರಧಾನ ಪಾತ್ರಧಾರಿ. ವಿಶ್ವ ವಾಣಿಜ್ಯ ಸಂಸ್ಥೆ ಕೇವಲ ವೇದಿಕೆ ಅಷ್ಟೆ.

ನಿಮ್ಮ ವಿರೋಧಿಗಳು ನೀವು ಹೋರಾಟವನ್ನು ಒಂದು ವ್ಯಾಪಾರವನ್ನಾಗಿ ಮಾಡಿಕೊಂಡಿದ್ದೀರೆಂದು ಹೇಳುತ್ತಾರಲ್ಲ......

(ನಗುತ್ತಾರೆ) ವ್ಯಾಪಾರವೆಂದರೆ ಲಾಭ ಮತ್ತು ಸಂಪಾದನೆ. ನಮ್ಮದೆಲ್ಲವನ್ನೂ ಈ ಹೋರಾಟದಲ್ಲಿ ಅರ್ಪಿಸಿದ್ದೇವೆ. ನಾವು ನಿಜವಾಗಿಯೂ ಬಯಸುವುದು ಹೋರಾಟದ ನಮ್ಮ ಹಕ್ಕನ್ನು ಚಲಾಯಿಸಬೇಕೆಂಬುದೇ ಆಗಿದೆ. ಬದುಕು ದುರಂತಕ್ಕೆ ಒಳಗಾಗಿರುವುದರಿಂದ ಹೋರಾಟದ ಅನಿವಾರ್ಯತೆಯಿದೆ. ನಾವು ದಣಿವರಿಯದ ನಮ್ಮ ಬದ್ಧತೆಯನ್ನೂ ಮತ್ತು ಉತ್ಸಾಹವನ್ನೂ ಕಳೆದುಕೊಂಡಿಲ್ಲವಾದ್ದರಿಂದ ನಾವು ನಮ್ಮಹೋರಾಟವನ್ನು ಮುಂದುವರೆಸುತ್ತೇವೆ. ಈ ಸಂಗತಿಯನ್ನೇ ಬಹಳಷ್ಟು ಜನ ಅರ್ಥಮಾಡಿಕೊಳ್ಳಲಾರರು.

ನೀವು ರಾಜಕಾರಣವನ್ನು ಸೇರುವಿರಾ? ಕಳೆದ ಚುನಾವಣಾ ಸಮಯದಲ್ಲಂತೂ ಚುನಾವಣೆಯಲ್ಲಿ ನೀವು ಧುಮುಕುವಂತಿದ್ದಿರಿ......

ನಾನೀಗಾಗಲೆ ರಾಜಕಾರಣದಲ್ಲಿದ್ದೇನೆಂದೇ ಯಾವಾಗಲೂ ಹೇಳುತ್ತಾ ಬಂದಿದ್ದೇನೆ. ನಾನು ಚುನಾವಣಾ ರಾಜಕೀಯವನ್ನು ಹತ್ತಿರದಿಂದಲೂ, ದೂರದಿಂದಲೂ ನೋಡುತ್ತೇನೆ. ಚುನಾವಣೆಯಲ್ಲಿ ಭಾಗವಹಿಸುವ ಅಗತ್ಯವಿದೆಯೆಂದೇನೋ ನನಗೆ ಬಹಳಷ್ಟು ಅನಿಸುತ್ತದೆ. ಅದನ್ನೆ ನಾವು ರಾಷ್ಟ್ರೀಯ ಜನಾಂದೋಲನಗಳ ಸಂಘಟನೆ ಎಂಬ ಅರ್ಥದಲ್ಲಿ ಹೇಳಿದ್ದೇನೆ. ಅದರ ಉದ್ದೇಶವೆ ಈ ಚುನಾವಣಾ ರಾಜಕೀಯದಲ್ಲಿ ಪ್ರವೇಶಿಸುವುದು ಮತ್ತು ಅದಕ್ಕೆ ಸವಾಲೊಡ್ಡುವುದೇ ಆಗಿದೆ. ಆದರೆ ಈ ಕಾರ್ಯ ಚುನಾವಣಾ ರಾಜಕೀಯದಲ್ಲಿ ನೇರವಾಗಿ ಪ್ರವೇಶಮಾಡುವುದರ ಮೂಲಕ ಸಾಧ್ಯವೆಂದು ನನಗನಿಸುವುದಿಲ್ಲ.

ನರ್ಮದಾ ಉಳಿಸಿ ಆಂದೋಲನದಲ್ಲಿ ವಿದೇಶಿ ಹಣದ ಹೂಡಿಕೆ ಇದೆಯೆಂಬ ಆರೋಪವಿದೆಯಲ್ಲಾ......

ಇದು ಪೂರ್ಣ ನಿಜ. ರಾಜ್ಯಶಕ್ತಿಯ, ಅದರ ಸಂಸ್ಕೃತಿಯ ಮತ್ತು ಸಮಾಜದೊಂದಿಗಿನ ಅದರ ಸಂಬಂಧ ಬದಲಾಗುತ್ತಿದೆ. ಬೃಹತ್ ಅಣೆಕಟ್ಟುಗಳ ನಿರ್ಮಾಣದ ಮೌಖಿಕ ಪ್ರಶ್ನೆಗಳನ್ನೆತ್ತಿದಾಗ ರಾಜ್ಯದ ಪ್ರತಿಕ್ರಿಯೆ ಕಠೋರವಾಗಿರುತ್ತದೆ. ಒರಟಾಗಿರುತ್ತದೆ. ಮತ್ತು ಪೈಶಾಚಿಕವೂ ಆಗಿರುತ್ತದೆ ಬಂಡವಾಳ ಹೂಡಿಕೆದಾರರಿಗೂ ಮತ್ತು ಸಾಲಕೊಡುವವರಿಗೂ ಅದು ಎಷ್ಟು ಜವಾಬ್ದಾರಿಯಾಗಿರುತ್ತದೊ ಅಷ್ಟೆ ಜವಾಬ್ದಾರಿಯುತವಾಗಿ ಜನರ ಬಗ್ಗೆ ಇರುವುದಿಲ್ಲ.

ನದಿಗಳ ಜೋಡಣೆಯ ಮತ್ತು ತಮಿಳುನಾಡುನಂಥ ರಾಜ್ಯಗಳಲ್ಲಿಯ ನೀರಿನ ಅಭಾವದ ಬಗ್ಗೆ ನಿಮ್ಮ ಆಲೋಚನೆ ಏನು?

ನದಿಗೆ ಸಂಬಂಧಿಸಿದ ಕಾಡು ಇವುಗಳ ನಿರ್ವಹಣೆ ಹಾಗೂ ಸಣ್ಣ

ಪ್ರಮಾಣದ ಜಲಾನಯನ ಪ್ರದೇಶದಿಂದಿಡಿದು ದೊಡ್ಡ ಜಲಾನಯನ ಪ್ರದೇಶದವರೆಗಿನ ನೀರು ಮತ್ತು ಕಾಡಿನ ಸರಿಯಾದ ನಿರ್ವಹಣೆಯೆ ಇದಕ್ಕೆ ಉತ್ತರ. ೨೦೦೨ ನೇ ಇಸವಿಯಲ್ಲಿ ಎನ್.ಡಿ.ಎ ಸರ್ಕಾರವು ತನ್ನ ನೀತಿಯನ್ನು ಘೋಷಿಸಿತ್ತು ಆ ನೀತಿಯ ಪ್ರಮುಖ ಅಂಶ ಜಲಸಂಪನ್ಮೂಲಗಳ ಮೇಲೆ ಸಮುದಾಯದ ನಿಯಂತ್ರಣವಿರಬೇಕೆಂಬುದು. ಜಲಕ್ಷಾಮ ಮತ್ತು ಜಲಪ್ರವಾಹವನ್ನು ತಪ್ಪಿಸಲು ಇದೇ ಸರಿಯಾದ ಕ್ರಮವೂ ಹೌದು. ನದಿಗಳ ಜೋಡಣೆಯಿಂದ ಈ ಮೊದಲು ಅನುಭವಿಸದೆ ಇದ್ದ ಪ್ರಮಾಣಕ್ಕಿಂತ ದೊಡ್ಡ ಪ್ರಮಾಣದಲ್ಲಿ ಜನರ ಉಚ್ಚಾಟನೆಯಾಗುತ್ತದೆ ಮತ್ತು ನದಿಗಳಿಗೆ ಸಂಬಂಧಿಸಿದ ಪರಿಸರದ ವ್ಯವಸ್ಥೆಯೇ ನಾಶವಾಗುತ್ತದೆ. ನದಿಗಳ ಜೋಡಣೆಯಿಂದುಂಟಾಗುವ ಪರಿಣಾಮಗಳ ಬಗ್ಗೆ ಸರಿಯಾದ ಅಂದಾಜು ಮಾಡಲಾಗುವುದೆಂದೂ, ಸೂಕ್ತ ಪರಿಹಾರ ಯೋಜನೆಯನ್ನು ಮಾಡಲಾಗುವುದೆಂದೂ ಸರ್ಕಾರ ಎಷ್ಟೇ ಗಟ್ಟಿಯಾಗಿ ಹೇಳಿದರೂ ಸಹ ಈಗಾಗಲೆ ಬಾಕ್ರಾನಂಗಲ್‌ನಿಂದ ನರ್ಮದಾ, ನಾಗಾರ್ಜುನಸಾಗರ, ಉಕೈ, ಪೆರಿಯಾರ್ ನದಿಗಳ ಜೋಡಣೆಯನ್ನು ಮತ್ತು ೨೦೦೫ ರಲ್ಲಿಯ ಕೆನ್‌ಬೆಟ್ವಾ ಜೋಡಣೆಯವರೆಗಿನ ಸಲಹೆಯನ್ನು ನಾವು ಗಮನಿಸಿದಾಗ ಸರ್ಕಾರ ಕೊಟ್ಟ ಮಾತುಗಳಿಗೂ ಮತ್ತು ವಸ್ತುತಃ ಆದ ಸಂಗತಿಗಳಿಗೂ ಮಧ್ಯೆ ದೊಡ್ಡ ಅಂತರವಿರುವುದು ಕಾಣುತ್ತದೆ.

ನದಿಗಳ ಜೋಡಣೆ ಅನಿವಾರ್ಯವಾಗಿ ಖಾಸಗೀಕರಣದತ್ತಲೇ ಸಾಗುತ್ತದೆ. ಅದು ಕೇವಲ ನೀರಿನ ಖಾಸಗೀಕರಣವಷ್ಟೆ ಅಲ್ಲ ನದಿಗಳ ಖಾಸಗೀಕರಣವೂ ಆಗುತ್ತದೆ. ಏಕೆಂದರೆ ನದಿಗಳ ಜೋಡಣೆಗೆ ಅಗತ್ಯವಿರುವ ಶೇ೬೦.೦೦೦ ಕೋಟಿಯಷ್ಟು ದೊಡ್ಡ ಮೊತ್ತ ವಿದೇಶಿ ಬಂಡವಾಳ ಹೂಡಿಕೆದಾರರಿಂದ, ವಿಶ್ವಬ್ಯಾಂಕ್‌ನಿಂದ, ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನಿಂದ, ಬಹುರಾಷ್ಟ್ರೀಯ ಕಂಪನಿಗಳಿಂದ ಬರಲು ಮಾತ್ರ ಸಾಧ್ಯ. ಆದ್ದರಿಂದಲೇ ಈ ಸಂಘಟನೆಗಳು ತಮ್ಮ ತಮ್ಮ ವಿಭಾಗಗಳನ್ನು ಪ್ರಾರಂಭಿಸಿವೆ. ವಿಶ್ವ ವಾಣಿಜ್ಯ ಸಂಸ್ಥೆಯ ವ್ಯವಸಾಯೇತರ ಮಾರುಕಟ್ಟೆ ಕ್ಷೇತ್ರದಲ್ಲಿ ನೀರನ್ನು ಒಂದು ವ್ಯಾಪಾರಿ ಪದಾರ್ಥವೆಂದು ಪರಿಗಣಿಸಲಾಗುತ್ತದೆ ಮತ್ತು ನಗರ ಅಭಿವೃದ್ಧಿ ಯೋಜನೆ ಖಾಸಗೀಕರಣವನ್ನೇ ತನ್ನ ಮುಖ್ಯ ರಣನೀತಿಯನ್ನಾಗಿಟ್ಟುಕೊಂಡಿದೆ. ಆದ್ದರಿಂದ ನದಿಗಳ ಮೂಲಕ ಮತ್ತು ಜಲಾನಯನ ಪ್ರದೇಶಗಳ ಮೂಲಕ ದೊರೆಯುವ ನೀರು ವಾಣಿಜ್ಯ ವಿಭಾಗದ ಕೈಗೇ ಹೋಗುತ್ತದೆ. ನದಿಜೋಡಣೆ ಅವರಿಗೆ ಪ್ರವೇಶದ್ವಾರವನ್ನು ತೆರೆದುಕೊಡುತ್ತದೆ.

ಅನು–ಸು.ಕೌ

ಸಾಭಾರ– ದಿ. ಹಿಂದೂ.

***

ಶ್ರೀಮಂತ ರಾಷ್ಟ್ರಗಳ ಧನಸಹಾಯ ಉತ್ತರವೇ?

-ಶಾರದಾ ಗೋಪಾಲ

ಈ ಮಿಲೇನಿಯಂನಲ್ಲಿ ಆಗಬೇಕಾದ ಅಭಿವೃದ್ಧಿ ಗುರಿಯನ್ನು ೨೦೦೫ರೊಳಗೆ ಸಾಧಿಸಲು ಇನ್ನೂ ಹೆಚ್ಚಿನ ಧನಸಹಾಯದ ಅವಶ್ಯಕತೆ ಇದೆ ಎಂದು ಹಲವರ ಕೂಗು. ಹೌದು? ಹೆಚ್ಚಿನ ಹಣ ಬಂದರೆ ಪರಿಸ್ಥಿತಿ ಸುಧಾರಿಸುವುದೇ?

ಬರಗಾಲಗಳಾಗುತ್ತವೆ, ಬೆಳೆ ಬರುವುದಿಲ್ಲ. ಅತಿವೃಷ್ಟಿಗಳಾಗುತ್ತವೆ, ಬೆಳೆಹಾನಿಯಾಗುತ್ತದೆ. ಜಿಲ್ಲೆಗಳು ರಾಜ್ಯ ಸರಕಾರಗಳನ್ನು, ರಾಜ್ಯಗಳು ಕೇಂದ್ರ ಸರಕಾರಗಳನ್ನೂ, ಪರಿಹಾರಧನಕ್ಕಾಗಿ ಮೊರೆ ಇಡುತ್ತವೆ. ಹಣಹರಿದು ಬರುತ್ತದೆ ಕೋಟಿ, ಕೋಟಿಗಳಲ್ಲಿ. ಅತಿವೃಷ್ಟಿಯಿಂದ, ಅನಾವೃಷ್ಟಿಯಿಂದ ಬಳಲುವವರ ಪರಿಸ್ಥಿತಿ ಸುಧಾರಣೆ ಆಗುತ್ತದೆಯೇ ಇದರಿಂದ? ಎಲ್ಲಿಯಾದರೂ ಆಗಿರುವ ಉದಾಹರಣೆ ಇದೆಯೇ?

ಹಾಗೆಯೇ ಬಡ ರಾಷ್ಟ್ರಗಳು ವಿಶ್ವ ಬ್ಯಾಂಕಿನಿಂದಲೂ, ಮುಂದುವರೆದ ದೇಶಗಳಿಂದಲೂ ಧನಸಹಾಯ ಬೇಡುತ್ತವೆ. "ಬಡರಾಷ್ಟ್ರಗಳನ್ನು ಮುಂದೆ ತರಲೆಂದು ಮುಂದುವರಿದ ದೇಶಗಳು ಧನಸಹಾಯ ಮಾಡುತ್ತವೆ. ಮಿಲೇನಿಯಂ ಅಭಿವೃದ್ಧಿ ಗುರಿ ಎಂದು ಒಂದು ಗುರಿಯನ್ನಿಟ್ಟುಕೊಂಡು ಅತ್ಯಂತ ಹಿಂದುಳಿದ ರಾಷ್ಟ್ರಗಳ ಸಾಲ ಮನ್ನಾ ಮಾಡಬೇಕು, ಅವಕ್ಕೆ ಇನ್ನಷ್ಟು ಸಾಲ ಕೊಡಬೇಕು" ಎಂದು ವಿಶ್ವಸಂಸ್ಥೆಯಲ್ಲಿ ಒಪ್ಪಂದಗಳಾದವು. ಬಡದೇಶಗಳ ಉದ್ಧಾರಕ್ಕಾಗಿ ಕೈಗಾರೀಕೃತ ದೇಶಗಳು ಇನ್ನೂ ಹೆಚ್ಚೆಚ್ಚು ಯೋಜನೆಗಳಲ್ಲಿ ಹಣ ತೊಡಗಿಸಬೇಕು ಎಂದು ಮುಂದುವರಿದ ರಾಷ್ಟ್ರಗಳು ಹೊಸ ಹೊಸ ಯೋಜನೆಗಳನ್ನು ಮುಂದಿಡುತ್ತಿವೆ.

ಇನ್ನೂ ಹೆಚ್ಚಿನ ಧನಸಹಾಯ ಬೇಕೆ? ಎಷ್ಟು ಬೇಕು ಎಂಬೆಲ್ಲ ವಿಚಾರಗಳಿಗೆ ಹೋಗುವ ಮುನ್ನ ಈ ಧನಸಹಾಯ ಏನೆಂಬುದನ್ನೇ ನಾವೊಮ್ಮೆ ಪ್ರಶ್ನಿಸಿ ನೋಡಬೇಕೇನೋ ಎನಿಸುತ್ತದೆ. ವಿದೇಶೀ ಧನಸಹಾಯ, ಓಡಿಎ ಹಣ, ವಿಶ್ವಬ್ಯಾಂಕ್ ನಿಧಿ, ಇವು ಶಿಕ್ಷಣ, ಆರೋಗ್ಯ, ಅರಣ್ಯಾಭಿವೃದ್ಧಿ, ಜಲಾನಯನಾಭಿವೃದ್ಧಿ ಎಂದೆಲ್ಲ ಹೆಸರಲ್ಲಿ ಹರಿದು ಬರುತ್ತದೆ. ಶ್ರೀಮಂತ ದೇಶಗಳು ಅಷ್ಟು ಉದಾರತನದಿಂದ ನಮಗೆ ಧನಸಹಾಯ ಮಾಡುತ್ತವೆಯೇ? ಅಥವಾ ಸಹಾಯದ ಹಸ್ತದೊಳಗೆ ಷರತ್ತಿನ ಚೀಟಿಗಳೂ ಇವೆಯೇ?

ಉತ್ತರದ ದೇಶಗಳಿಂದ ಬರುವ ಧನಸಹಾಯ ಉದಾರತೆಯದ್ದೂ ಅಲ್ಲ, ಷರತ್ತಿಲ್ಲದೇ ಬಂದುದೂ ಅಲ್ಲ. ಅದಕ್ಕೆ ಬಡ್ಡಿಯೂ ಉಂಟು, ಜೊತೆಗೆ

ಷರತ್ತುಗಳ ಸರಮಾಲೆಯೂ ಲಗತ್ತಿಸಿದೆ. ಸಾಲ ನೀಡುವ ದೇಶಗಳ ಬೇರೆ ಬೇರೆ ಹಿತಾಸಕ್ತಿಗಳೂ ಈ ಸಾಲಕ್ಕೆ ಅಂಟಿಕೊಂಡಿವೆ. ಶೀತಲಸಮರದ ಕಾಲದಿಂದ ಇಂದಿನವರೆಗೂ ಇದು ಹೀಗೆಯೇ ಇದೆ.

ಬುಷ್ ಸರಕಾರವು ಕೊಡಮಾಡುತ್ತಿರುವ ಮಿಲೆನಿಯಂ ಚಾಲೆಂಜ್ ಅಕೌಂಟ್ ಹಣವು ತಾತ್ವಿಕ, ರಾಜಕೀಯ ಮತ್ತು ಆರ್ಥಿಕ ಷರತ್ತುಗಳಿಂದ ಕೂಡಿದೆ. "ಅಮೆರಿಕಾದ ನೀತಿಗಳನ್ನು ಬೆಂಬಲಿಸಿ. ವಿರೋಧಿಸಬೇಡಿ. ಅಮೆರಿಕದ ಸ್ವತಂತ್ರ ಮಾರುಕಟ್ಟೆ ನೀತಿಯನ್ನು ಒಪ್ಪಿಕೊಳ್ಳಿ" ಎಂಬುದು ಅದಕ್ಕಂಟಿರುವ ಷರತ್ತು.

ಧನಸಹಾಯ ಒಂದು ದಂಡವೇ ಹೊರತು ಉಡುಗೊರೆಯಲ್ಲ ಎಂಬುದನ್ನು ನಾವು ಮೊದಲು ತಿಳಿದುಕೊಳ್ಳೋಣ. ಅದು ಆಫ್ರಿಕಾದಲ್ಲಿರಬಹುದು, ಲ್ಯಾಟಿನ್ ಅಮೆರಿಕಾದಲ್ಲಿರಬಹುದು, ನಮ್ಮನ್ನಾಳಿಹೋದ ಬ್ರಿಟಿಷರದ್ದಿರಬಹುದು, ಫ್ರಾನ್ಸಿನದ್ದಿರಬಹುದು, ಅಥವಾ ಅಮೆರಿಕಾದ್ದಿರಬಹುದು. ತಮ್ಮ ಬಲದ ವಿಸ್ತರಣೆ ಮಾಡಿಕೊಳ್ಳಲಿಕ್ಕೆ ಆ ಧನಸಹಾಯದ ಹಣದ ನಿಜಬಳಕೆ ಆಗುತ್ತದೆ.

ಆ ಸಹಾಯವು ತಮಗೆ ಸ್ನೇಹಪರವಾಗಿರುವ ಒಂದು ರಾಜನ ಬಲ ಹೆಚ್ಚಿಸಲಿಕ್ಕೂ ಇರಬಹುದು. ಉದಾಹರಣೆಗೆ ಝೈರೆ ದೇಶದ ದೊರೆಯು ತುಂಬ ಭ್ರಷ್ಟನಾಗಿದ್ದನೆಂದು ಜಗತ್ತಿಗೆಲ್ಲ ಗೊತ್ತಿತ್ತು. ತನ್ನದೇ ದೇಶವನ್ನು, ದೇಶಬಾಂಧವರನ್ನು ಲೂಟಿ ಮಾಡಿಯೇ ಮಾಡಿದನಾತ. ವಿದೇಶೀ ಬ್ಯಾಂಕುಗಳಲ್ಲಿ ಆತನ ಬ್ಯಾಲೆನ್ಸ್ ಬೆಳೆಯುತ್ತ ಹೋಯಿತು. ದೇಶದ ಜನಗಳು ಮಾತ್ರ ದಾರಿದ್ರ್ಯದ ದಳ್ಳುರಿಯೊಳಗೆ ಉರಿದುಹೋಗತೊಡಗಿದರು.

ವಿದೇಶೀ ಸಹಾಯವೇ ಇರಲಿ, ಸ್ವದೇಶೀ ಸಹಾಯವೇ ಇರಲಿ ಅದು ಜನರ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಿಂತಲೂ ಹಣ ಕೊಟ್ಟವರ ಪ್ರಾಬಲ್ಯವನ್ನು ಹೆಚ್ಚಿಸುವ ಕೆಲಸ ಮಾಡುತ್ತದೆ. ಅವರ ನೀತಿ ನಿಯಮ, ಷರತ್ತುಗಳನ್ನು ಗಟ್ಟಿಮಾಡುತ್ತ ಹೋಗುತ್ತದೆ. ಉದಾಹರಣೆಗೆ ಮಹಿಳಾ ಸ್ವಸಹಾಯ ಗುಂಪುಗಳಿಗೆ ಬ್ಯಾಂಕುಗಳು ಈಗ ಧನಸಹಾಯ ಮಾಡುತ್ತಿವೆ. ಗುಂಪುಗಳು ಖಾತೆ ತೆಗೆಯುವಾಗ ತಮ್ಮ ಸಂಘದ ಅಧ್ಯಕ್ಷರು, ಕಾರ್ಯದರ್ಶಿಯ ಹೆಸರಲ್ಲಿ ಖಾತೆ ತೆಗೆಯುತ್ತಿದ್ದರು. ಈಗ ಗ್ರಾಮೀಣ ಬ್ಯಾಂಕುಗಳು ಪ್ರತಿನಿಧಿ-೧, ಪ್ರತಿನಿಧಿ-೨ ಎಂದೇ ಖಾತೆ ತೆಗೆಯಬೇಕೆಂದು ಕ್ಯಾತೆ ತೆಗೆದಿದ್ದಾರೆ. ಬ್ಯಾಂಕಿನವರು ಹಣವುಳ್ಳವರು, ಶಿಕ್ಷಣವಂತರು. ಆದರೆ ಸ್ವಸಹಾಯ ಸಂಘದ ಹೆಣ್ಮಕ್ಕಳು ಹಣವಿಲ್ಲದವರು, ಹಣ ಬೇಡುವವರು. ಯಾವಾಗಲೂ ಹಣ ಕೊಡುವವರದ್ದೇ ಮೇಲುಗೈ ತಾನೆ?

ಸುಜಲಾ ಜಲಾನಯನದ ಧನಸಹಾಯ ಹಳ್ಳಿ ಹಳ್ಳಿಗೆ ಬಂದಿತು ನಿಜ, ಆದರೆ ಅದರ ಕೆಲಸದ ನೀತಿ, ವೇಗ, ಒತ್ತಡ ಎಲ್ಲವೂ ವಿಶ್ವಬ್ಯಾಂಕ್ ರೂಪಿತ. ಈ ಕೆಲಸ ಹೀಗೆ ಅಂದರೆ ಹೀಗೇ ಲಾಗೂ ಆಗಬೇಕು. ಆ ಪ್ರದೇಶದ ಜನರ ನಿರ್ಧಾರದಂತೆ ಅಲ್ಲ, ಅದಕ್ಕೆ ಅವಶ್ಯವಿರುವ ಸಾಧನ ಸಲಕರಣೆಗಳನ್ನು ಸರಕಾರ

ಆಯಾ ದೇಶದಿಂದಲೇ ತರಿಸಬೇಕು. ಹೀಗೆ ಅಲ್ಲಿಂದ ಹಣ ಬರುತ್ತಲೇ ಒಂದಷ್ಟು ಭಾಗ ಹಾಗೆಯೇ ಹಿಂತಿರುಗಿ ಬಿಡುತ್ತದೆ. ಅಕ್ಷನ್‌ಏಡ್ ಸಂಸ್ಥೆಯ ಒಂದು ಅಧ್ಯಯನದ ಪ್ರಕಾರ ಅಮೆರಿಕಾದಿಂದ ಬಂದ ಧನಸಹಾಯದ ೮೬%, ಫ್ರಾನ್ಸ್‌ದಿಂದ ಬಂದ ಧನಸಹಾಯದ ೮೯% ಆಯಾ ದೇಶಗಳಿಗೇ ಹಿಂದಿರುಗುತ್ತದೆ. ಈಗ ಉತ್ತರ ಕರ್ನಾಟಕದ ೨೫ ಪಟ್ಟಣಗಳ ಅಭಿವೃದ್ಧಿಗಾಗಿ ಏಶಿಯಾ ಡೆವೆಲಪ್‌ಮೆಂಟ್ ಬ್ಯಾಂಕು ೪೨೫ ಕೋಟಿ ಡಾಲರುಗಳ ಹಣಸಹಾಯ ಮಾಡಲಿದೆಯಷ್ಟೇ. ಅದರಲ್ಲೂ ೮೦% ಭಾಗ ಅಲ್ಲಿಂದ ಬರಲಿರುವ ತಜ್ಞರ ಪರಿಣಿತಿಯನ್ನು ಪಡೆಯಲಿಕ್ಕಾಗಿಯೇ ಹೋಗಲಿದೆ.

ಎಷ್ಟೇ ಧನಸಹಾಯ ಬರಲಿ, ಇನ್ನೂ ಬೇಕು, ಇನ್ನಷ್ಟು ಬೇಕು ಎಂಬ ಹಪಾಹಪಿತನವೇ ಹೆಚ್ಚುತ್ತದೆಯೇ ಹೊರತು ಸಾಕೆಂಬ ತೃಪ್ತಿ ಇಲ್ಲವೇ ಇಲ್ಲ! ಏಕೆ? ಹಿಂದೆ ಕರ್ನಾಟಕದ ಅರಣ್ಯಾಭಿವೃದ್ಧಿಯ ಯೋಜನೆಗೆಂದು ಓಡಿಏದಿಂದ ಕೋಟಿಗಟ್ಟಲೆ ನೆರವು ಬಂದಿತ್ತು. ಖರ್ಚೂ ಆಯಿತು. ಈಗ ಮತ್ತೆ ಜಪಾನ್ ದೇಶದಿಂದ ಕರ್ನಾಟಕ ಅರಣ್ಯ ಬೆಳೆಸಲು ೮೦೦ ಕೋಟಿ ರೂಪಾಯಿಗಳ ನೆರವು ಬರುತ್ತಿದೆ. ಸಾಲದ ಮೇಲೆ ನಮ್ಮ ಅವಲಂಬನೆ ಮತ್ತೂ ಮತ್ತೂ ಹೆಚ್ಚುತ್ತಿದೆ ಏಕೆ? ಇದಕ್ಕೆ ಕಾರಣ ಕೂಡಾ ಆ ಸಾಲದ ಜೊತೆಗಿರುವ ಷರತ್ತುಗಳೇ. ಧನಸಹಾಯದ ಭಾರಕ್ಕಿಂತಲೂ ಷರತ್ತುಗಳ ಭಾರದಿಂದಲೇ ಸಾಲಪಡೆದ ದೇಶ ಕುಸಿಯಬೇಕು. ವಿಶ್ವ ಬಾಂಕ್, ಐ.ಎಂ.ಎಫ್. ಹಾಕಿದ ನೀತಿ ನಿಯಮಗಳಿವು.

ಕೊಟ್ಟ ಹಣಕ್ಕೆ ಪ್ರತಿಯಾಗಿ ಶ್ರೀಮಂತ ದೇಶದ ಕಂಪನಿಗಳಿಗೆ ಸ್ವತಂತ್ರವಾಗಿ ಎಲ್ಲಿ ಬೇಕೆಂದರಲ್ಲಿ ಬಂಡವಾಳ ಹೂಡಲು ಅದಕ್ಕಿರುವ ಅಡೆತಡೆಗಳನ್ನೆಲ್ಲ ತೆಗೆದು ಹಾಕಲು, ತಮ್ಮ ಮಾಲುಗಳಿಗೆ ಮುಕ್ತ ಮಾರುಕಟ್ಟೆ ನೀಡಲು ಈ ದೇಶಗಳ ಸರಕಾರಗಳನ್ನು ಬಗ್ಗಿಸುತ್ತವೆ. ಅದೇ (ಉದಾಹರಣೆಗೆ ಬೇಳೆ, ಸಕ್ಕರೆ) ನಮ್ಮಲ್ಲಿ ಧಿಂಡಿಯಾಗಿ ಬೆಳೆಯುತ್ತಿದ್ದರೂ ಆ ದೇಶದಿಂದ ಬೆಲೆತೆತ್ತು ತರಿಸಿಕೊಳ್ಳಬೇಕು. ನಮ್ಮಲಿಯದಕ್ಕಿಂತ ಕಡಿಮೆ ಬೆಲೆಗೆ ಮಾರಲು ಅವಕಾಶ ಕೊಡಬೇಕು. ಕೈ ಒಡ್ಡಿದ ತಪ್ಪಿಗೆ ಸರಕಾರಗಳು ಮಣಿಯುತ್ತವೆ. ಸಾಲದ ಭಾರದಿಂದ ರೈತನೂ ಕುಸಿಯುತ್ತಾನೆ, ದೇಶವೂ ಕುಸಿಯುತ್ತದೆ. ಬೆಳೆಗೆ ಬೆಲೆಯೇ ಸಿಗದಿದ್ದಾಗ ರೈತ ನೇಣಿಗೆ ಗೋಣುಕೊಡುತ್ತಾನೆ.

ಕ್ರಿಶ್ಚಿಯನ್ ಏಡ್‌ನ ಒಂದು ಅಧ್ಯಯನದ ಪ್ರಕಾರ ಕಳೆದ ೨೦ ವರ್ಷಗಳಲ್ಲಿ ಆಫ್ರಿಕಾ ದೇಶಗಳು ವಿಶ್ವ ಬ್ಯಾಂಕು, ಐ. ಎಂ. ಎಫ್ ನಿಂದಾಗಿ ಕಳೆದುಕೊಂಡಿದ್ದು ೨೭೨ ಬಿಲಿಯನ್ ಡಾಲರುಗಳು. ಈ ಹಣ ಅವರ ಕೈಯಲ್ಲಿದ್ದು ಸದುಪಯೋಗವಾಗಿದ್ದರೆ ಅವರ ಎಲ್ಲಾ ಸಾಲಗಳೂ ತೀರಿಯೇ ಹೋಗುತ್ತಿತ್ತು. ಈ ಮೊತ್ತ ಈ ವೇಳೆಯಲ್ಲಿ ಆಫ್ರಿಕಾ ದೇಶ ಮಾಡಿದ್ದ ಸಾಲಕ್ಕೆ ಸಮನಾಗಿತ್ತು! ವ್ಯಾಪಾರ ಒಪ್ಪಂದದ ಮೇಜಿಗೆ ಬಂದಾಗ ಸಮಾನ ಸ್ವಾತಂತ್ರ್ಯ ಆಫ್ರಿಕಾಕ್ಕೆ ಸಿಕ್ಕಿದ್ದಿದ್ದರೆ

ಇಂದು ಜಾಗತಿಕ ವ್ಯಾಪಾರದಲ್ಲಿ ಅದರ ಪಾಲು ಈಗಿರುವುದಕ್ಕಿಂತ ಎರಡು ಪಟ್ಟು ಇರುತ್ತಿತ್ತು. ಗಳಿಸುವ ಲಾಭ ೫೦% ಜಾಸ್ತಿ ಇರುತ್ತಿತ್ತು. ದೇಶದ ವಾರ್ಷಿಕ ವರಮಾನ ಇನ್ನೂ ೧.೪% ನಷ್ಟು ಜಾಸ್ತಿ ಇರುತ್ತಿತ್ತು. ಬಹುಷಃ ಅಲ್ಲಿನ ರೈತರೂ ಬದುಕಿಕೊಳ್ಳುತ್ತಿದ್ದರು.

ಹಣದ ಹರಿವಂತೂ ಹೀಗಾಯಿತು. ಇನ್ನು ಸಂಪನ್ಮೂಲಗಳು? ದೇಶದ ನಿಜ ಸಂಪನ್ಮೂಲಗಳೆಲ್ಲ ವ್ಯಾಪಾರ ಒಡಂಬಡಿಕೆಯಲ್ಲಿ ಹಾದಿತಪ್ಪಿ ಬಡದೇಶದಿಂದ ಶ್ರೀಮಂತ ದೇಶಗಳಿಗೇ ಹರಿದವು. ಸಮಾನ ವ್ಯಾಪಾರ ಒಪ್ಪಂದ ಇದ್ದಿದ್ದರೆ ಅವರ ಸಂಪನ್ಮೂಲಕ್ಕೆ ಇನ್ನೂ ಹೆಚ್ಚಿನ ಬೆಲೆ ಸಿಕ್ಕು ವಿದೇಶೀ ಸಾಲದ ಅವಲಂಬನೆಯಿಂದ ಮುಕ್ತಿ ಸಿಕ್ಕಿರುತ್ತಿತ್ತೇನೋ. ೧೯೭೦-೨೦೦೨ರ ಮಧ್ಯೆ ಆಫ್ರಿಕಾ ಪಡೆದಿದ್ದು ೪೫೦ ಬಿಲಿಯನ್ ಡಾಲರು. ಹಿಂತಿರುಗಿಸಿದ್ದು ೫೫೦ ಬಿಲಿಯನ್ ಡಾಲರುಗಳು. ಆದಾಗ್ಯೂ ಇನ್ನೂ ೩೦೦ ಬಿಲಿಯನ್ ಡಾಲರುಗಳ ಹೊರೆ ಅದರ ಮೇಲಿದೆ ಎಂದರೆ ಸಾಲವೆಂಬ ಸಂಕೋಲೆ ಅದೆಂಥ ವಿಷವರ್ತುಳದೊಳಕ್ಕೆ ನಮ್ಮನ್ನೆಳೆಯುವುದೆಂದು ವಿಚಾರ ಮಾಡಿ.

ಧನಸಹಾಯದ ವಿಷಯ ಮಾತಾಡುವಾಗ ನಮ್ಮಲ್ಲಿರುವ ಭ್ರಷ್ಟಾಚಾರವನ್ನು ನಾವು ಕಡೆಗಣಿಸುವಂತಿಲ್ಲ. ಬಂದ ಹಣದ ಎಷ್ಟೋ ಪಾಲನ್ನು ಅದೇ ತಿಂದು ಹಾಕುತ್ತಿದೆ. ವಿಶ್ವಬ್ಯಾಂಕಿನ ನೆರವಿನಿಂದ ಶುರುಮಾಡಿದ ಸರ್ವ ಶಿಕ್ಷಣ ಹಳ್ಳಿಮಕ್ಕಳನ್ನೂ ಜಪಾನ್ ನೆರವಿನಿಂದ ಲಾಗೂ ಆಗುತ್ತಿರುವ ಅರಣ್ಯಾಭಿವೃದ್ಧಿ ಯೋಜನೆ ಅರಣ್ಯವನ್ನೂ ಮುಟ್ಟುವುದೇ ಇಲ್ಲ. ಹೀಗೆಯೇ ಇನ್ನೂ ಹತ್ತು ಹಲವು ಯೋಜನೆಗಳು ಜನರನ್ನು ಬಡತನದ ರೇಖೆಯಿಂದ ಮೇಲೆತ್ತಬೇಕಾದ ಯೋಜನೆಗಳು ಅವರನ್ನು ಇನ್ನೂ ಕೆಳಕ್ಕೇ ತಳ್ಳುತ್ತವೆ. ರಾಜಕಾರಣಿಗಳು, ಕಾಂಟ್ರಾಕ್ಟದಾರರು, ಅಧಿಕಾರಿಗಳು ಹೆಚ್ಚೆಚ್ಚು ಶ್ರೀಮಂತರಾಗುತ್ತಿದ್ದಾರೆ, ದೇಶದ ಜನತೆ ಮತ್ತೂ ಬಡವಾಗುತ್ತಿದೆ. ಮತ್ತೆ ಇದೇ ಜನ ಇನ್ನಷ್ಟು ಸಹಾಯ ಎನ್ನುತ್ತ ಭಿಕ್ಷಾ ಪಾತ್ರೆ ಹಿಡಿದು ಹೊರಡುತ್ತಾರೆ, (ಎಂದೂ ತುಂಬದ ತಮ್ಮ ಗುಡಾಣದ ಹೊಟ್ಟೆಗಾಗಿ) ದೇಶದ ಹೆಸರಲ್ಲಿ ಸಾಲ ಎತ್ತಲು.

ಸಾಲ ಕೊಡುವವರ ನೀತಿಯೂ ಅದೇ ಇದೆ, ಸಾಲ ತರುವವರ ಯೋಜನೆಯೂ ಅಂತೇ ಇದೆ. ಆದರೆ ವಿದೇಶೀ ಸಾಲ ಎಂದೂ ಪರಾವಲಂಬನೆಯನ್ನೇ ಸೃಷ್ಟಿಸುತ್ತ ಹೋಗುತ್ತದೆಂಬ ಅರಿವು ನಮಗೆ ಬೇಕು. ವಿದೇಶೀ ಧನಸಹಾಯ ಬೇಡವೆನ್ನುವ ಮನೋಸ್ಥೈರ್ಯ ಮೊದಲು ನಮ್ಮಲ್ಲಿ ಬೇಕು. ಆ ಮನೋಸ್ಥೈರ್ಯವನ್ನು ತುಂಬಿಕೊಳ್ಳಲು ಮೊದಲು ನಮ್ಮ ನೀತಿ ನಿಯಮಗಳಲ್ಲಿ ಆಮೂಲಾಗ್ರ ಬದಲಾವಣೆ ಆಗಬೇಕು. ಅನವಶ್ಯಕವಾಗಿ ಹಣದ ದುರ್ಬಳಕೆ, ಉದಾಹರಣೆಗೆ ಅರಣ್ಯೀಕರಣಕ್ಕೆಂದು ತಂದ ಸಾಲದ ೭೦% ಭಾಗ ಅಧಿಕಾರಿಗಳ ಕಚೇರಿಯ ಸೌಲಭ್ಯ, ಸಲಕರಣೆಗಳು, ಅವರಿಗೆಲ್ಲ ಕಾರು, ಬಂಗ್ಲೆಗಳಿಗೇ

ಹೋದರೆ ಸಸಿ ಮಾಡುವುದಕ್ಕೆ ಗಿಡನೆಡುವುದಕ್ಕೆ ದುಡ್ಡೆಲ್ಲಿ ಉಳಿಯಿತು? ನಿರ್ಧಾರ ತೆಗೆದುಕೊಳ್ಳುವಲ್ಲಿ, ಹಣ ಬಳಸುವುದರಲ್ಲಿ ಪಾರದರ್ಶಕತೆ, ಜವಾಬ್ದಾರಿ ಬರುವಂತಾಗಬೇಕು. ಆಗ ವೆಚ್ಚ ತಂತಾನೇ ತಗ್ಗುತ್ತದೆ.

ವಿದೇಶೀಸಾಲ ನಮ್ಮ ಸಮಸ್ಯೆಗಳಿಗೆ ಉತ್ತರವಲ್ಲವೆಂದು ನಮಗೆ ಗೊತ್ತಾಗಬೇಕು. ನಮ್ಮ ಅಭಿವೃದ್ಧಿ ವಿದೇಶೀಯಾದರೆ ಸಾಲ ಬೇಕಾಗುತ್ತದೆ, ಆದರೆ ಯೋಜನೆ ಸ್ಥಳೀಯವಾಗಿದ್ದರೆ, ಸ್ಥಳೀಯ ಜನರಿಂದ ರೂಪುಗೊಂಡು ಸ್ಥಳೀಯರಿಗೇ ಪ್ರಯೋಜನವಾಗುವಂತಿದ್ದರೆ ಅದಕ್ಕೆ ವೆಚ್ಚ ಬಹಳ ಬೇಡ. ಏಕೆಂದರೆ ಅದಕ್ಕೆ ಸಂಪನ್ಮೂಲವೂ ಸ್ಥಳೀಯವಾಗಿಯೇ ದೊರಕುತ್ತದೆ.

* * *

ಇಂಗ್ಲಿಷ್ ಬೇಕು, ಆದರೆ ಆತುರದ ಕ್ರಮ ಬೇಡ

-ಎಲ್. ನರಸಿಂಹಯ್ಯ ತೊಂಡೋಟಿ

ಇಂಗ್ಲಿಷ್ ಭಾಷಾ ಬೋಧನೆಯ ವಿಷಯ ಸುದ್ದಿ ಮಾತ್ರವಾಗಿಲ್ಲ. ಸಮಸ್ಯೆಯಾಗಿ ಬೆಳೆಯುತ್ತಿದೆ, ಚಳುವಳಿ ಪ್ರತಿ ಚಳುವಳಿಗಳಾಗುವ ಲಕ್ಷಣಗಳೂ ಕಂಡು ಬರುತ್ತಿವೆ. ಈ ಸಮಸ್ಯೆಯ ಸೃಷ್ಟಿಕರ್ತರಲ್ಲಿ ಕನ್ನಡ ಪರವಾದವರಿದ್ದಾರೆ-ಆದರೆ ಇವರು ಇಂಗ್ಲಿಷ್ ವಿರೋಧಿಗಳೇನೂ ಅಲ್ಲ; ಹಾಗೆಯೇ ಇಂಗ್ಲಿಷ್ ಪರವಾದವರೂ ಇದ್ದಾರೆ-ಅವರನ್ನು ಕನ್ನಡ ವಿರೋಧಿಗಳೆಂದು ಹೇಳಲಾಗದಿದ್ದರೂ. ಅವರ ಒಲವು, ನಿಲುವುಗಳನ್ನು ಗಮನಿಸಿದಾಗ ಇಂಗ್ಲಿಷ್ ಭಾಷೆಯ ಕಡೆಗೇ ಹೆಚ್ಚೆಂದು ಕಂಡು ಬರುತ್ತದೆ.

ಅಂತಾರಾಷ್ಟ್ರೀಯ ಪ್ರಾಮುಖ್ಯತೆ ಹೊಂದಿರುವ ಹಾಗೂ ಈ ದೇಶದ ಶಿಕ್ಷಣ ಕ್ಷೇತ್ರದಲ್ಲಿ ತನ್ನದೇ ಆದ ಪಾರಮ್ಯ ಹಾಗೂ ಅನಿವಾರ್ಯತೆಗಳನ್ನು ಸಂಸ್ಥಾಪಿಸಿಕೊಂಡಿರುವ ಇಂಗ್ಲಿಷಿನಂಥ ಭಾಷೆಯನ್ನು ಕಲಿಯುವುದು ಬೇಡವೆಂದು ಹೇಳಲು ಸಾಧ್ಯವೇ ಇಲ್ಲ. ಆದರೆ, ಆ ಭಾಷೆಯವರಿಂದಲೇ ಆಳಲ್ಪಟ್ಟ ಮತ್ತು ಬಹು ಭಾಷಾ ಸಂಪನ್ನೆಯಾದ ಭಾರತದಲ್ಲಿ ಇಂಗ್ಲಿಷನ್ನು ಯಾವ ಹಂತದಿಂದ ಬೋಧಿಸಿದರೆ ಶೈಕ್ಷಣಿಕವೆಸುತ್ತದೆ, ಪರಿಣಾಮಕಾರಿಯಾಗುತ್ತದೆ ಎಂಬುದಷ್ಟನ್ನೇ ವಿಚಾರ ಮಾಡಬೇಕಾಗಿದೆ. (ತನ್ನ ಭಾಷೆಯನ್ನು ಭಾರತದಲ್ಲಿ ಜಾರಿಗೊಳಿಸಿದ ಮೆಖಾಲೆ ಮಹಾಶಯರು, ೫ನೇ ತರಗತಿಗೆ ಬದಲಾಗಿ ಒಂದನೆಯ ತರಗತಿಯಿಂದಲೇ ಜಾರಿಗೊಳಿಸಲು ಯಾವ ಅಡ್ಡಿಯೂ ಇರಲಿಲ್ಲ. ಪರಿಸರದ ಭಾಷೆಯಲ್ಲಿ ತಳಹದಿ ನಿರ್ಮಾಣವಾಗಬೇಕು ಜೊತೆಗೆ ದೇಶಿಯ ಭಾಷೆಗಳನ್ನು ಕಡೆಗಣಿಸಬಾರದು ಎಂಬ ಔದಾರ್ಯವಿತ್ತು.)

ಸ್ವಾತಂತ್ರ್ಯಾನಂತರದ ಈ ಐದೂವರೆ ದಶಕಗಳಲ್ಲಿ ನಾವು ಮಾತೃಭಾಷೆ, ನಾಡಿನಭಾಷೆ, ರಾಷ್ಟ್ರಭಾಷೆ ಮತ್ತು ಸಂಪರ್ಕಭಾಷೆಗಳನ್ನು ಗುರುತಿಸುವಷ್ಟು ಪ್ರಜ್ಞಾವಂತರಾಗಿದ್ದೇವೆ. ಈ ಒಂದೊಂದು ಭಾಷೆಗೂ ತನ್ನದೇ ಆದ ಆದ್ಯತೆ ಮತ್ತು ಅಗತ್ಯತೆಗಳಿದ್ದರೂ, ಎಲ್ಲವನ್ನೂ ಸಮಾನವಾಗಿ ಕಲಿಯಲು ಸಾಧ್ಯವಿಲ್ಲ. ಅತಿರೇಕಗಳಿಗೆ ಅವಕಾಶ ನೀಡದೆ ವಿಚಾರ ಮಾಡಿದಾಗ, ಕಾಲೋಚಿತವಾದ ಎರಡಂಶಗಳು ನಮಗೆ ಮನವರಿಕೆಯಾಗುತ್ತವೆ. ಭಾಷಾಧಾರಿತ ಪ್ರಾಂತ್ಯರಚನೆಯಾದ ಮೇಲೆ, ಪ್ರಾಂತೀಯ ಭಾಷೆಗೆ ಆದ್ಯತೆ-ಅನಿವಾರ್ಯತೆಗಳಿರಬೇಕು ಎಂಬುದೊಂದು;

ಸಂಪರ್ಕ ಮತ್ತು ಜ್ಞಾನಾರ್ಜನೆಗೆ ಸುವರ್ಣ ಹಾಗೂ ಸಮರ್ಥ ಮಾಧ್ಯಮವೆನಿಸಿರುವ ಇಂಗ್ಲಿಷ್ ಭಾಷೆಯ ಅಗತ್ಯತೆ ಇನ್ನೊಂದು. ಈ ಎರಡೂ ವಾಸ್ತವಾಂಶಗಳ ನೆಲೆಗಟ್ಟಿನ ಮೇಲೆ ವಿಚಾರ ಮಾಡಿ ಇಂಗ್ಲಿಷ್ ಭಾಷಾ ಬೋಧನೆಗೆ ಸೂಕ್ತವಾದ ಹಂತ ಮತ್ತು ವಾತಾವರಣಗಳನ್ನು ಕಂಡು ಕೊಳ್ಳಬೇಕಾಗಿದೆ.[ಮಾತೃಭಾಷೆ (ಪ್ರಾಂತೀಯ ಭಾಷೆಯಲ್ಲದ) ಮತ್ತು ರಾಷ್ಟ್ರಭಾಷೆಗಳು ಐಚ್ಛಿಕವಾಗುತ್ತವೆ]

ಪ್ರಾಥಮಿಕ ಒಂದನೆಯ ತರಗತಿಯಿಂದಲೇ ಸರ್ಕಾರಿ ಶಾಲೆಗಳಲ್ಲಿಯೂ ಇಂಗ್ಲಿಷ್ ಭಾಷೆಯನ್ನು ಕಲಿಸಬೇಕು, ಆ ಮೂಲಕ ಹಳ್ಳಿಗಾಡಿನ ಮಕ್ಕಳೂ "ನಾವು ಸಮ ನಿಮಗೆ" ಎಂದು ಪಟ್ಟಣದವರೊಂದಿಗೆ ಸ್ಪರ್ಧಿಸುವಂತಾಗಬೇಕೆಂದು ಪ್ರತಿಪಾದಿಸುವುದು ಸದುದ್ದೇಶವೆನಿಸಿದರೂ, ಅದಕ್ಕೆ ಹಿಂದುಳಿದವರ್ಗ, ದಲಿತವರ್ಗಗಳ ಸೊಗಡನ್ನು ಸವರುತ್ತಿರುವುದು ನೋವಿನ ಸಂಗತಿಯಾಗಿದೆ. ಹೀಗೆ ಪ್ರತಿಪಾದಿಸುವ ವಿಚಾರವಂತರು ಹಾಗೂ ವಿದ್ಯಾವಂತರು, ಕಲಿಯುವ ಮಕ್ಕಳನ್ನು, ಕಲಿಸುವ ಶಿಕ್ಷಕ ವರ್ಗವನ್ನು ಮತ್ತು ಸರ್ಕಾರಿ ಶಾಲೆಗಳ ಸ್ಥಿತಿ-ಗತಿಗಳನ್ನು ಸ್ವಲ್ಪವೂ ಗಮನಿಸದಿರುವುದು ಆಶ್ಚರ್ಯಕ್ಕಿಂತ ಆತಂಕವೆನಿಸುತ್ತದೆ.

೫ ಪ್ಲಸ್ ವಯಸ್ಸಿನ ಮಕ್ಕಳು. ಪ್ರಾಥಮಿಕ ಹಂತದಲ್ಲಿ ಎರಡು ಭಾಷೆಗಳನ್ನು, ಕನ್ನಡೇತರರಾದರೆ ಮೂರು ಭಾಷೆಗಳನ್ನು ಕಲಿಯಬೇಕಾಗುತ್ತದೆ. ತರಗತಿಗಳನ್ನು ದಾಟಿದಂತೆ ನಾಲ್ಕನೆಯ ಭಾಷೆಯೂ ಗಂಟು ಬೀಳುತ್ತದೆ. ಶಿಕ್ಷಣದ ಏಣಿಯನ್ನು ಏರುತ್ತ ಹೋದಂತೆ ವಿದ್ಯಾರ್ಥಿಯೊಂದಿಗೆ ಉಳಿಯುವುದು, ಉದರಂ ಭರಣಕ್ಕೆ ಆಸರೆಯಾಗಿ ನಿಲ್ಲುವುದು ಎರಡು ಭಾಷೆಗಳು ಮಾತ್ರ- ಒಂದು ನಾಡಿನ ಭಾಷೆ, ಇನ್ನೊಂದು ಇಂಗ್ಲಿಷ್ ಭಾಷೆ. ಹಂತಾನುಕ್ರಮದಲ್ಲಿ ಕಳಚಿಕೊಳ್ಳುವ ಉಳಿದೆರಡು ಭಾಷೆಗಳ ಕಲಿಕೆಗೆ ವ್ಯಯವಾದ ಎಳೆಯರ ಸಮಯ-ಸಾಮರ್ಥ್ಯಗಳನ್ನು ಮುಖ್ಯ ವಿಷಯಗಳ ಕಲಿಕೆಗೆ ವಿನಿಯೋಗಿಸಿದ್ದಿದ್ದರೆ ಸಾಧನೆ ಇನ್ನಷ್ಟು ಉತ್ತಮವಾಗಿರುತ್ತಿತ್ತು. (ಕುವೆಂಪು ಅವರ ದ್ವಿಭಾಷಾ ಸೂತ್ರ ಸಮಂಜಸವಾಗಿದೆ)

ನಮ್ಮ ಶಿಕ್ಷಕ ವರ್ಗ ಇತ್ತೀಚಿನ ವರ್ಷಗಳಲ್ಲಿ ಬಹಳ ಮಟ್ಟಿಗೆ ತನ್ನ ಸ್ವಂತಿಕೆಯನ್ನು ಕಳೆದುಕೊಂಡು, ನಿರ್ದೇಶಿತ ರೀತಿಯಲ್ಲಿ ಯಾಂತ್ರಿಕವಾಗಿ ಕೆಲಸ ಮಾಡುವ (ಕಾರ್ಮಿಕ) ವರ್ಗವಾಗಿದೆ. ಬೋಧನಾ ಕಾರ್ಯಕ್ಕಿಂತ ಬೋಧನಾನು ಸಂಬಂಧಿ ಕಾರ್ಯಗಳನ್ನು ನಿರ್ವಹಿಸಲೇಬೇಕಾದ ವ್ಯವಸ್ಥೆ-ಒತ್ತಡಗಳಿವೆ; ಆದ್ದರಿಂದ ಪಾಠ ಬೋಧನೆಯನ್ನು ಹೇಗೋ ಮುಗಿಸುತ್ತ, ತತ್ಸಂಬಂಧವಾದ ಬಾಧಕಾಂಶಗಳೇನನ್ನೂ ಯಾರ ಹತ್ತಿರವೂ ಹೇಳಿಕೊಳ್ಳಲಾಗದೆ ಮೂಕವೇದನೆ ಪಡುವ ಶಿಕ್ಷಕ ವರ್ಗವೂ ಇಲ್ಲದಿಲ್ಲ. ಇಂತಹ ಸ್ಥಿತಿಯಲ್ಲಿ, ಪ್ರಾಥಮಿಕ ಒಂದನೇ ತರಗತಿಯಿಂದ ಇಂಗ್ಲಿಷ್ ಬೋಧಿಸಲಾರಂಭಿಸುವುದು ಎಷ್ಟು ಪ್ರಯೋಜನಕಾರಿ?

ಭಾಷಾ ಬೋಧನಾ ವಿಧಾನದ ರೀತ್ಯ, ಪ್ರಾರಂಭದ ಎರಡು ವರ್ಷ ಬಾಯ್ದೆರೆ ಬೋಧನೆ ಅಂದರೆ ಭಾಷೆಯನ್ನು ಕೇಳಿಸುವ ಮತ್ತು ಹೇಳಿಸುವ

ಅಭ್ಯಾಸ (Listening & Speaking) ಆಗಬೇಕಾದ್ದು ಅತ್ಯಗತ್ಯ. (ಪ್ರಾಥಮಿಕ ಅಥವಾ ಪೂರ್ವ ಪ್ರಾಥಮಿಕಕ್ಕೆ ದಾಖಲಾಗುವ ಪ್ರತಿ ಮಗುವಿಗೆ ತನ್ನ ಪರಿಸರದ ಅಥವಾ ಮಾತೃಭಾಷೆಯ ಬಾಯ್ದೆರೆ ಅಭ್ಯಾಸ ೩-೪ ವರ್ಷ ಆಗಿರುತ್ತದೆ ಎಂಬುದು ಗಮನಾರ್ಹ) ನಿಗದಿಯಾಗಿರುವ ಇಂಗ್ಲಿಷ್ ಪಠ್ಯ ಪುಸ್ತಕವನ್ನು ಮುಚ್ಚಿಟ್ಟು ೧೦ರಿಂದ ೧೫ ನಿಮಿಷ ಬಾಯ್ದೆರೆಯಾಗಿ ಇಂಗ್ಲಿಷನ್ನು ಬೋಧಿಸುವ ಅಥವಾ ಸಂಭಾಷಿಸುವ ಅಭ್ಯಾಸ ನಮ್ಮ ಶಿಕ್ಷಕವರ್ಗಕ್ಕೆ ಇಲ್ಲದಿರುವಾಗ ಎರಡು ವರ್ಷ ಏನು ಮಾಡಿಯಾರು, ಹೇಗೆ ಮಾಡಿಯಾರು ಎಂಬುದನ್ನು ಊಹಿಸಿಕೊಳ್ಳಲೂ ಕಷ್ಟವಾಗುತ್ತದೆ. ಹೆಸರಾಂತ ಕಾನ್ವೆಂಟ್ ಶಾಲೆಗಳಲ್ಲಿಯೇ ಬಾಯ್ದೆರೆ ಬೋಧೆಯನ್ನು ಕಡೆಗಣಿಸಿ ಕೇವಲ Reading & writing ಕೌಶಲಗಳಲ್ಲಿ ಡ್ರಿಲ್ವರ್ಕ್ ನಡೆಯುತ್ತಿರುವಾಗ, ಇಂಗ್ಲಿಷ್‌ಗಾಗಿ ಇಂಗ್ಲಿಷ್ ಬೋಧನೆ, ಮಗುವಿಗಾಗಿ ಇಂಗ್ಲಿಷ್ ಬೋಧನೆ ಅಲ್ಲ ಎಂಬುದು ನಿಜವಾಗುತ್ತದೆ. ಈ ಸಂಬಂಧದಲ್ಲಿ ಚಳುವಳಿಗಾರರ ಅಭಿಪ್ರಾಯ ಒತ್ತಡಗಳನ್ನು ಗಮನಿಸುವಂತೆಯೇ, ತರಗತಿ ಬೋಧಕರ ಹಾಗೂ ಅವರ ಧ್ವನಿಯಂತಿರುವ ಶಿಕ್ಷಕ ಪ್ರತಿನಿಧಿಗಳ (ಶಾಸಕರ) ಅಭಿಪ್ರಾಯಗಳನ್ನೂ ಎಷ್ಟು ವ್ಯಾಪಕವಾಗಿ ಪಡೆದು ಪರಿಶೀಲಿಸಿದರೆ ಅಷ್ಟೂ ಒಳ್ಳೆಯದು, ತಡವಾದರೂ ತೊಂದರೆಯಿಲ್ಲ.

ಹಳ್ಳಿಗಾಡಿನ ಸಾರ್ವಜನಿಕರ ಮಕ್ಕಳಿಗೆ, ಸಾಮಾಜಿಕವಾಗಿ ಮೇಲಾಗಿ ಆರ್ಥಿಕವಾಗಿ ಹಿಂದುಳಿದವರ ಮಕ್ಕಳಿಗೆ ಎಟುಕುವಂತಿರುವ ಕಲ್ಪವೃಕ್ಷ-ಕಾಮಧೇನುಗಳು ಸರ್ಕಾರಿ ಶಾಲೆಗಳು. ಇವುಗಳಲ್ಲಿ ಕರ್ತವ್ಯ ನಿರ್ವಹಿಸುವ ಶಿಕ್ಷಕವರ್ಗ, ನಿಗದಿಯಾದ ಪರೀಕ್ಷೆಗಳಲ್ಲಿ ಉತ್ತಮಾಂಕಗಳನ್ನು ಗಳಿಸಿದವರೇ ಆಗಿರುತ್ತಾರೆ. ಅಧ್ಯಯನ ಮಾಡಿದ ವಿಷಯಗಳಲ್ಲಿ ಪ್ರಬುದ್ಧತೆ ಇರುತ್ತದೆಯಾದರೂ, ವೃತ್ತಿಪರವಾದ ಬದ್ಧತೆಯ ಕೊರತೆಯಿಂದಾಗಿ ಸರ್ಕಾರಿ ಶಾಲೆಗಳು ಬಹಳ ಮಟ್ಟಿಗೆ ಗುಣಾತ್ಮಕವಾಗಿ ಕಂಡು ಬರುತ್ತಿಲ್ಲ. ಆ ಕಾರಣದಿಂದಾಗಿಯೇ ವಂತಿಗೆ ಸುಲಿಯುವ ಖಾಸಗೀ ಶಾಲೆಗಳು ಗ್ರಾಮಾಂತರದಲ್ಲಿಯೂ ಸಮಾನಾಂತರವಾಗಿ ತಲೆಯೆತ್ತಲವಕಾಶವಾಗುತ್ತಿದೆ. ಪಟ್ಟಣ ನಗರ ಪ್ರದೇಶಗಳಲ್ಲಿಯಂತೂ ಅವುಗಳದ್ದೇ ವ್ಯಾಪ್ತಿ, ವಹಿವಾಟುಗಳು.

ತಾನು ತೆರೆಯುತ್ತಿರುವ ಶಾಲೆಗಳ ಸಂಖ್ಯಾ ಬಾಹುಳ್ಯದಿಂದ ಆಯಾಸ ಪಡುತ್ತಿರುವ ಸರಕಾರ, ಜನಪ್ರಿಯವೆನ್ನಬಹುದಾದ ಶುಲ್ಕರಹಿತ ಶಿಕ್ಷಣ, ವಿದ್ಯಾರ್ಥಿವೇತನ, ಉಚಿತಪುಸ್ತಕ, ಸಮವಸ್ತ್ರ, ಬಿಸಿಯೂಟ ಮುಂತಾದ ಯೋಜನೆಗಳಿಗೆ ಧಾರಾಳವಾಗಿ ವೆಚ್ಚ ಮಾಡುತ್ತಿರುವ ಸರಕಾರ, ಪಠ್ಯಾವಳಿಗನುಗುಣವಾದ ಶ್ರವಣ-ವೀಕ್ಷಣ ಬೋಧನೋಪಕರಣಗಳನ್ನು, ಅಗತ್ಯ ಸಂಖ್ಯೆಯ ಉಪಾಧ್ಯಾಯರನ್ನು ಮತ್ತು ಕಲಿಕೆಗೆ ಪೂರಕವಾಗುವ ವಾತಾವರಣವನ್ನು ಕಲ್ಪಿಸುವುದರಲ್ಲಿ ಯಶಸ್ವಿಯಾಗುತ್ತಿಲ್ಲವೆಂಬುದಕ್ಕೆ ಪುರಾವೆ ಬೇಕಾಗಿಲ್ಲ. ಪ್ರಬುದ್ಧತೆಯ

ಜೊತೆಗೆ ಬದ್ಧತೆ ಇರುವ ಉಪಾಧ್ಯಾಯರೂ ಸರ್ಕಾರಿ ಶಾಲೆಗಳಲ್ಲಿ ಇದ್ದಾರೆ ಆದರೆ ಅವರ ಸಂಖ್ಯೆ ತೀರಾ ಕಡಿಮೆ. ತಮ್ಮ ಮಕ್ಕಳ ಭವಿಷ್ಯಕ್ಕಾಗಿ ಗುಣಾತ್ಮಕವಾದ ಶಿಕ್ಷಣ ಕೊಡಿಸುವ ಏಕೈಕ ಉದ್ದೇಶದಿಂದ ಪೋಷಕವರ್ಗ, ಹೊರೆಯೆನಿಸುವ ವಂತಿಗೆಯನ್ನೂ, ಹೆಚ್ಚು ಎನ್ನುವಷ್ಟು ಶುಲ್ಕವನ್ನೂ ತೆತ್ತು ಖಾಸಗೀ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸುತ್ತಿದ್ದಾರೆ; ಕೇವಲ ಇಂಗ್ಲೀಷ್ ಬೇಕು ಎಂಬ ಒಂದೇ ಕಾರಣದಿಂದ ಅಲ್ಲ. ಖಾಸಗೀ ಶಾಲೆಗಳ ಪ್ರಭಾವಲಯದಲ್ಲಿ ಸರ್ಕಾರಿ ಶಾಲೆಗಳು ಮಂಕಾಗಿ ಕಂಡು ಬರುತ್ತಿವೆ, ಕೆಲವು ಕಡೆ ವಿದ್ಯಾರ್ಥಿಗಳ ಸಂಖ್ಯೆಯಿಲ್ಲದೆ ಸೊರಗುತ್ತಿವೆ.

ಈ ಎಲ್ಲ ವಾಸ್ತವಾಂಶಗಳ ಹಿನ್ನೆಲೆಯಲ್ಲಿ ತಜ್ಞರು, ಆಸಕ್ತ ಪೋಷಕವರ್ಗ, ಶಿಕ್ಷಣ ಇಲಾಖೆ ಮತ್ತು ಸರಕಾರಗಳು ಪುನರಾಲೋಚಿಸುವುದು ಅಗತ್ಯವಾಗಿರುತ್ತದೆ.

ಕಲಿಯುವ ಅವಕಾಶಗಳನ್ನು ಸಮಾನವಾಗಿರಿಸುವುದಕ್ಕಾಗಿ, ಸರ್ಕಾರಿ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ಆಕರ್ಷಿಸುವುದಕ್ಕಾಗಿ, ಮುಖ್ಯವಾಗಿ ಭ್ರಮಾಧೀನರಾಗಿರುವ ಪೋಷಕರ ಸಂತೋಷಕ್ಕಾಗಿ ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸಲು ಅಡ್ಡಿಯಿಲ್ಲ-ಮೂರನೇ ತರಗತಿಯಿಂದ ಕಲಿಸುವುದಾದರೆ ತೀರಾ ಶೈಕ್ಷಣಿಕವೆನಿಸುತ್ತದೆ. ಪ್ರಾರಂಭದ ಎರಡು ವರ್ಷ ಬಾಯ್ದೆರೆ ಬೋಧನೆಯಾಗಬೇಕು. ಇದಕ್ಕಾಗಿ ಪ್ರತಿ ಶಾಲೆಯಲ್ಲಿ both in content and Methodology ಗಳಲ್ಲಿ ತರಬೇತಿ ಪಡೆದ ಉಪಾಧ್ಯಾಯರಿರುವಂತೆ ನೋಡಿಕೊಳ್ಳಬೇಕು. ಬೋಧನೆಗೆ ಪೂರಕವಾಗಿ ಬೇಕಾಗಿರುವ ಶ್ರವಣ-ವೀಕ್ಷಣ ಬೊಧನೋಪಕರಣಗಳ ಸರಬರಾಜೂ ಆಗಿರಬೇಕು.

ರಾಜ್ಯ ಸರಕಾರದ ಅನುಮತಿ ಮತ್ತು ಅನುದಾನಗಳನ್ನು ಪಡೆದು ನಡೆಯುವ ಶಾಲೆಗಳಲ್ಲಿಯೂ, ನಾಡಿನ ಭಾಷೆ ಕನ್ನಡ ಶಾಲಾ ಶಿಕ್ಷಣದಲ್ಲಿ ಪ್ರಥಮ ಭಾಷೆಯಾಗಿರಬೇಕು ಇಲ್ಲವೆ ಮಾಧ್ಯಮವಾಗಿರಬೇಕು.

ಕನ್ನಡವನ್ನು ಪ್ರಥಮ ಭಾಷೆಯಾಗಿ ತೆಗೆದುಕೊಂಡು, ಕನ್ನಡ ಮಾಧ್ಯಮದಲ್ಲಿಯೇ ವ್ಯಾಸಂಗ ಮಾಡಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗುವವರಿಗೆ (ಇವರು ಬಹಳ ಮಟ್ಟಿಗೆ ಗ್ರಾಮಾಂತರದ ಸಾಮಾನ್ಯರ ಮಕ್ಕಳಾಗಿರುತ್ತಾರೆ) ಮುಂದಿನ ವ್ಯಾಸಂಗಾವಕಾಶಗಳಲ್ಲಿ ಮತ್ತು ಉದ್ಯೋಗ ನೀಡಿಕೆಯಲ್ಲಿ ಆದ್ಯತೆ ನೀಡುವುದಾಗಬೇಕು. ಇದರಿಂದ ಪ್ರಾಂತೀಯ ಭಾಷೆಗೆ ಆದ್ಯತೆ ಅನಿವಾರ್ಯತೆ ದೊರಕಿದಂತಾಗಿ, ಇಂಗ್ಲಿಷಿಗೆ ಸ್ಥಾನವೂ ದೊರಕಿದಂತಾಗಿ ಭವಿಷ್ಯವನ್ನು ರೂಪಿಸಿಕೊಳ್ಳಲು ಸಾಧ್ಯವಾಗುವುದು.

* * *

ರಾಜಕೀಯ ಅವಧೂತ ವಿನೋಬಾ

–ನರಸಿಂಹ ದಾಬಡೆ.

(ವಿನೋಬಾ ವಿರಚಿತ ಸುಪ್ರಸಿದ್ಧ ಆಧ್ಯಾತ್ಮಿಕ ಗ್ರಂಥ 'ಗೀತಾ ಪ್ರವಚನ' ಪ್ರಕಟವಾಗಿ ೭೫ ವರ್ಷಗಳಾದವು. ಈಗ ಆ ಗ್ರಂಥದ ಅಮೃತ ಮಹೋತ್ಸವದ ಸಂಭ್ರಮ. ಈ ಲೇಖನದಲ್ಲಿ ವಿನೋಬಾರ ಸಂಕ್ಷಿಪ್ತ ಪರಿಚಯವಿದೆ.–ಸಂ)

ವಿನೋಬಾ ಭಾವೆ ಮಹಾತ್ಮಗಾಂಧಿಯವರ ಪಟ್ಟ ಶಿಷ್ಯರಲ್ಲಿ ಅಗ್ರಗಣ್ಯರು. ೧೯೫೦ರ ವೈಯುಕ್ತಿಕ ಸತ್ಯಾಗ್ರಹದ ಸಮಯಕ್ಕೆ ಪ್ರಥಮ ಸತ್ಯಾಗ್ರಹಿ ಎಂದು ಆರಿಸಿದಾಗ ಪ್ರಕಾಶಕ್ಕೆ ಬಂದದರು. ಈ ಮೊದಲು ಅವರ ಪರಿಚಯವಿದ್ದವರು ವಿರಳ. ಅವರು ಹುಟ್ಟಿದ್ದು ಮಹಾರಾಷ್ಟ್ರದ ಕುಲಾಬಾ ಜಿಲ್ಲೆಯ ಗಾಗೋದೆ ಎಂಬ ಗ್ರಾಮದಲ್ಲಿ ೧೧– ೯–೧೮೯೫ ರಂದು. ತಂದೆ ನರಹರಿಪಂತ್ ತಾಯಿ ರಖಮಾಯಿ. ಕರ್ನಾಟಕದವರು. ಅಜ್ಜ ಶಂಭೂರಾಯ. ಆ ದಿನಗಳಲ್ಲಿಯೇ ಅವರು ಶಿವದೇವಾಲಯದಲ್ಲಿ ಅಸ್ಪ್ರಶ್ಯರಿಗೆ ಊಟ ಹಾಕುತ್ತಿದ್ದರು. ದೇವರ ಮುಂದೆ ಮುಸಲ್ಮಾನರ ಸಂಗೀತ ಏರ್ಪಡಿಸುತ್ತಿದ್ದರು.

ವಿನೋಬಾ ಅವರಿಗೆ ತಾಯಿಯ ಮೇಲೆ ಅಪಾರ ಪ್ರೇಮ. ತಾಯಿ ನನ್ನ ದೇವರು. ಅವಳು ನನಗೊಂದು ಸತ್ವದ ಕೇಂದ್ರ, ಅವಳ ಪ್ರೇರಣೆಯಿಂದಲೇ ನಾನು, ನನ್ನ ಇಬ್ಬರು ತಮ್ಮಂದಿರು ಬ್ರಹ್ಮಚಾರಿ ಆದದ್ದು ಎಂದು ಹೇಳುತ್ತಿದ್ದರು. ಅವಳ ಸಂಗಡ

ರಾಮಾಯಣ, ಮಹಾಭಾರತ ಚರ್ಚಿಸುತ್ತಿದ್ದರು. ಅಲ್ಲದೆ ಪದ್ಯರೂಪ "ಗೀತಾಯಿ" ಎಂಬ ಹೊತ್ತಿಗೆಯನ್ನು ಮರಾಠಿಯಲ್ಲಿ ಬರೆದರು.

ಇವರು ಅತ್ಯಂತ ಕಠೋರ ವ್ರತಸ್ತರು. ಮಲಗಲು ಒಂದೇ ಕಂಬಳಿ. ಹೊದೆಯುವುದು, ತಲಗೊಂಬು ಇಲ್ಲ. ತಣ್ಣೀರ ಸ್ನಾನ, ಎಷ್ಟೇ ಬಿಸಿಲಿದ್ದರೂ ಕಾಲಲ್ಲಿ ಮೆಟ್ಟು ಇಲ್ಲ. ಊಟದಲ್ಲಿ ಉಪ್ಪು, ಖಾರ,ಸಿಹಿ ಇಲ್ಲ.

ಚಿಕ್ಕವರಿದ್ದಾಗ ಹೆಚ್ಚಿನ ಅಭ್ಯಾಸಕ್ಕೆ ಮುಂಬೈಗೆ ಹೊರಟವರು, ಅಲ್ಲಿಗೆ ಹೋಗದೆ ಕಾಶಿಗೆ ಹೋದರು. ಅಲ್ಲಿಂದಲೇ ತಂದೆಗೆ ಪತ್ರ ಬರೆದರು. ತಾವು ಮುಂಬೈಗೆ ಹೋಗದೆ ಬೇರೆಕಡೆಗೆ ಹೋಗಿದ್ದು, ತಾವು ಎಲ್ಲಿಯೆ ಇರಲಿ ತಮ್ಮಿಂದ ಅನೀತಿಕಾರ್ಯವಾಗುವುದಿಲ್ಲ ಎಂದು ತಿಳಿಸಿದರು.

ಅಲ್ಲಿ ಅವರು ಗಂಗಾತೀರದಲ್ಲಿ ಗೀತಾ ಉಪನಿಷತ್ತು ಅಭ್ಯಾಸ ಮಾಡಿದರು. ಛತ್ರದಲ್ಲಿ ಮಧ್ಯಾಹ್ನ ಊಟ ಸಂಜೆ ಉಪವಾಸ. ಒಂದು ವಿಧವಾಗಿ ಕಠೋರ

ತಪಸ್ಸನ್ನೇ ಮಾಡಿದರು. ಅಲ್ಲಿರುವಾಗಲೆ ಅವರಿಗೆ ಗಾಂಧೀಜಿ ದರ್ಶನವಾಯ್ತು. ಹಿಂದೂ ವಿಶ್ವವಿದ್ಯಾಲಯದ ಪದವಿದಾನ ಸಮಾರಂಭದಲ್ಲಿಯ ಗಾಂಧೀಜಿಯವರ ಭಾಷಣ ಕೇಳಿ ಪ್ರಭಾವಿತರಾಗಿ ಅವರ ಶಿಷ್ಯತ್ವವನ್ನು ವಹಿಸಿದರು. ಇದು ಒಂದು ವಿಧವಾಗಿ- ರಾಮಕೃಷ್ಣ -ವಿವೇಕಾನಂದರ ಭೇಟಿಯಂತೇ ಆಯಿತೆಂದು ಹೇಳಬಹುದು. ಆಗ ಗಾಂಧೀಜಿ ವಿನೋಬಾರ ತಂದೆಗೆ ಹೀಗೆ ಬರೆದರು, "ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ಇವನಿಗೆ ತುಂಬಾ ವೈರಾಗ್ಯ ಪ್ರಾಪ್ತವಾಗಿದೆ. ಇಷ್ಟು ಪ್ರಾಪ್ತವಾಗಲು ನಾನು ಎಷ್ಟೋ ಒದ್ದಾಡಿದೆ. ಸದ್ಯ ಆತ, ನನ್ನ ಹತ್ತಿರವೇ ಇರುವ."

ಮುಂದೆ ವೇದೋಪನಿಷತ್ತಿನ ಹೆಚ್ಚಿನ ಅಭ್ಯಾಸಕ್ಕಾಗಿ ವಾಯಿಗೆ ಹೋದರು. ಅಲ್ಲಿಂದಲೇ ವಿವರವಾದ ವರದಿಯನ್ನು ಗಾಂಧೀಜಿಗೆ ಕಳುಹಿಸಿದರು. ಅದಕ್ಕೆ ಗಾಂಧೀಜಿ ಹೀಗೆ ಉತ್ತರಕೊಟ್ಟರು; ನಿನ್ನನ್ನು ಯಾವ ರೀತಿ ಶ್ಲಾಘಿಸಬೇಕೋ ತಿಳಿಯದಾಗಿದೆ. ನಿನ್ನ ಬೆಲೆ ಅಳೆಯುವ ಸಾಮರ್ಥ್ಯ ನನ್ನಲ್ಲಿಲ್ಲ. ನಾನು ನಿನ್ನ ತಂದೆಯ ಸಮಾನ. ಒಳ್ಳೆಯ ನಡತೆಯಲ್ಲಿ ಮಗ ತಂದೆಯನ್ನು ಮೀರಿದರೆ ಆ ತಂದೆ ಧನ್ಯ. ಆಗ ಗಾಂಧೀಜಿಯವರು ಅವರಿಗೆ 'ಭೀಮಪರಾಕ್ರಮಿ' 'ಹರ್‌ಕ್ಯುಲಸ್' ಎಂಬ ಬಿರುದು ಕೊಟ್ಟರು.

ವಿನೋಬಾಗೆ ಗೀತೆಯ ಮೇಲೆ ಅಪಾರ ಪ್ರಭುತ್ವ. ಗೀತೆ ಅಂದರೆ ಪಂಚಪ್ರಾಣ. 'ನಾನು ಯಾವಾಗಲೂ ಗೀತಾ ಸಮುದ್ರದಲ್ಲಿ ಮುಳುಗಿರುವೆ, ಒಮ್ಮೊಮ್ಮೆ ದಂಡೆಯ ಮೇಲೆ ಆಡುವೆ' ಎಂದು ಹೇಳುವರು. ಗೀತಾ ಪ್ರವಚನ ಮಾಡಲು ನನಗೆ ಪೂರ್ವಸಿದ್ಧತೆ ಬೇಡ. ಅದು ನನ್ನ ಹೃದಯದಲ್ಲಿ ತುಂಬಿ ತುಳುಕುತ್ತದೆ.

ವಿನೋಬಾ ೧೯೩೨ ರಲ್ಲಿ ಧುಳೆ ಜೈಲಿನಲ್ಲಿದ್ದಾಗ ಮೊದಲು ಅಲ್ಲಿಯ ರಾಜಕೀಯ ಕೈದಿಗಳಿಗೆ ಗೀತಾಪ್ರವಚನ ಮಾಡಿದರು. ಮುಂದೆ ಅಲ್ಲಿಯ ಕ್ರಿಮಿನಲ್‌ಕೈದಿಗಳು, ಸ್ತ್ರೀಕೈದಿಗಳಿಗೂ ಗೀತಾಪಾನ ಮಾಡಿಸಿದರು. ಆಗ ಅಲ್ಲಿಯ ಜೇಲರ್ ತಮ್ಮ ಹೆಂಡತಿಯೊಡನೆ ಈ ಪ್ರವಚನಕ್ಕೆ ಬರುತ್ತಿದ್ದರು. ಹೀಗೆ ಇಡೀ ಜೈಲು ಗೀತಾಮಯವಾಗಿತ್ತು. ಮುಂದೆ ಈ ಪ್ರವಚನ ಎಲ್ಲ ಭಾಷೆಗಳಲ್ಲಿ ಪ್ರಕಟವಾಯ್ತು. ಹೀಗೆ ಇದೂ ಶ್ರೀಕೃಷ್ಣ ಪರಮಾತ್ಮನಂತೆ ಜೈಲಿನಲ್ಲಿಯೆ ಹುಟ್ಟಿತು.

ಸ್ವಾತಂತ್ರ್ಯದ ನಂತರ ದೇಶದ ಪರಿಸ್ಥಿತಿಯು ಅಲ್ಲೋಲಕಲ್ಲೋಲವಾಯಿತು. ಆಗ ಅವರು ತೆಲಂಗಾಣದಲ್ಲಿದ್ದರು. ಅಲ್ಲಿಯ ಕೆಲ ಅಸ್ಪ್ರಶ್ಯರು ಬಂದು ತಮಗೆ ಸಾಗುವಳಿ ಮಾಡಲು ಸ್ವಲ್ಪ ಭೂಮಿ ದೊರೆತರೆ ತಾವು ಶಾಂತ ರೀತಿಯಿಂದ ಉಪಜೀವನ ಮಾಡುವೆವು ಎಂದು ಹೇಳಿದರು. ಆಗ ಅಲ್ಲಿಯೇ ಇದ್ದ ಶ್ರೀರಾಮಚಂದ್ರರೆಡ್ಡಿ ೧೦೦ ಎಕರೆ ಭೂದಾನ ಕೊಡಲು ಮುಂದೆ ಬಂದರು. ಇದೆಲ್ಲ ಭಗವಂತನ ಕೃಪೆ ಎಂದೇ ಅವರ ಮತ. ಇದುವೇ ಭೂದಾನ ಗಂಗೆಯ ಉಗಮಸ್ಥಾನ. ಇದು ಮುಂದೆ ಹದಿಮೂರು ವರ್ಷ ಮೂರು ತಿಂಗಳು ಮೂರು ದಿವಸ ಹರಿದು ದೇಶದಲ್ಲೆಲ್ಲ ಒಂದು ಬಗೆಯ ಸತ್ಪ್ರವೃತ್ತಿಯ ಪ್ರಚಾರವಾಯಿತು.

ಮುಂದೆ ೧೯೫೭ರಲ್ಲಿ ಕರ್ನಾಟಕದ ಯಲವಾಲ ಎಂಬ ಗ್ರಾಮದಲ್ಲಿ ಸರ್ವಪಕ್ಷದ ರಾಜಕೀಯ ಮುಂಖಂಡರ ಭೂದಾನ ಗ್ರಾಮದಾನ ಪರಿಷತ್ ಸೇರಿತ್ತು. ಅದಕ್ಕೆ ರಾಜಕೀಯ ಮುಖಂಡರುಗಳಾದ ಡಾ॥ರಾಜೆಂದ್ರ ಪ್ರಸಾದ್, ಪಂಡಿತ್ ಜವಾಹರ್‌ಲಾಲ್ ನೆಹರು, ಮುರಾರ್ಜಿದೇಸಾಯಿ, ಕಾಮರಾಜ ನಾಡರ್, ನಂಬೂದರಿಪಾದ್, ನಿಜಲಿಂಗಪ್ಪ, ಸುಚೇತ ಕೃಪಲಾನಿ ಮುಂತಾದವರು ಬಂದಿದ್ದರು. ಎಲ್ಲರೂ ಸರ್ವಾನುಮತದಿಂದ ಈ ಭೂದಾನ ಗ್ರಾಮದಾನ ವಿಚಾರವನ್ನು ಬೆಂಬಲಿಸಿದರು ಮತ್ತು ಮಹಾಘೋಷಣೆ ಪತ್ರ ಕೊಟ್ಟರು. ಹೀಗೆ ಈ ವಿಚಾರ ಲೋಕಮಾನ್ಯವಾದಂತಾಯಿತು. ಈ ಪೂರ್ವದಲ್ಲಿ ೧೯೪೮ ರಲ್ಲಿ ಬಾಪೂಜಿ ನಂತರ ಸೇವಾಗ್ರಾಮದಲ್ಲಿ ಗಾಂಧೀ ಪರಿವಾರ ಒಟ್ಟುಗೂಡಿತು. ಅನೇಕ ಸಂಘ ಸಂಸ್ಥೆಗಳ ಪ್ರತಿನಿಧಿಗಳೂ ಬಂದಿದ್ದರು. ಆಗ ಡಾ॥ ರಾಜೇಂದ್ರ ಪ್ರಸಾದ್‌ರ ಹಿರಿತನದಲ್ಲಿ ಸರ್ವಸೇವಾ ಸಂಘದ ಸ್ಥಾಪನೆಯಾಯಿತು.

ವಿನೋಬಾಜಿ ಅವರ ಚಿಂತನೆ ಯಾವಾಗಲೂ ಮಹಾತ್ಮರ ಮಾರ್ಗದಲ್ಲಿಯ ಸೂತ್ರಯಜ್ಞ, ಭೂದಾನ ಗ್ರಾಮದಾನಯಜ್ಞ, ಶ್ರಮದಾನ, ಭಂಗೀಕಾರ್ಯ, ಚರ್ಮಹದ ಮಾಡುವುದು, ಗೋಸೇವಾ, ಋಗ್ಣರ ಸೇವೆ ಮುಂತಾದವುಗಳ ಕಡೆಗೆ ಇತ್ತೇ ಹೊರತು ಅಧಿಕಾರದ ರಾಜಕಾರಣದ ಕಡೆಗೆ ಇಣುಕಿ ಸಹ ನೋಡಲಿಲ್ಲ. ಒಂದು ವಿಧವಾಗಿ ಇದುವೇ ಅವರ ರಾಜಕಾರಣವಾಗಿತ್ತು.

ವಿನೋಬಾ ಅವರು ಭೂದಾನ ಪಾದಯಾತ್ರೆಯಲ್ಲಿದ್ದಾಗ ಧಾರವಾಡಕ್ಕೂ ಬಂದಿದ್ದರು. ಆಗ ನಾನು ಅವರೊಟ್ಟಿಗಿದ್ದೆ. ಅಲ್ಲಿ ೧೫ ದಿವಸ ಪಾದಯಾತ್ರೆ ಮಾಡಿ ಅದರ ವರದಿಯನ್ನು ಒಪ್ಪಿಸಲು, ಸಂದರ್ಶನ ಕೇಳಲು ಹುಬ್ಬಳ್ಳಿಯಿಂದ ಧಾರವಾಡಕ್ಕೆ ಬರುವಾಗ ನಮ್ಮೂರಿನಿಂದ ಹತ್ತು ನಿಮಿಷ ಸಮಯ ಕೊಡಲಾಗಿತ್ತು. ಅವರಿಗೆ ಅಲ್ಲಿ ವರದಿ ಒಪ್ಪಿಸಿ ಆಶೀರ್ವಾದ ಪಡೆದೆ.

ಮುಂದೆ ೧೯೮೨ ನವಂಬರ್ ಹದಿನೈದನೆ ದಿನಾಂಕ ಬೆಳಿಗ್ಗೆ ಒಂಭತ್ತೂವರೆ ಗಂಟೆಗೆ ಎಲ್ಲರಿಗೂ ಜೈ ಜಗತ್ ಹೇಳಿ ಪ್ರಣಾಮ ಮಾಡಿ ಕೊನೆ ಉಸಿರು ಎಳೆದು ಧನ್ಯರಾದರು.

ಹೀಗೆ ಅವರು ಪ್ರತ್ಯಕ್ಷ ರಾಜಕಾರಣದಲ್ಲಿರದಿದ್ದರೂ ರಾಜಕೀಯ ಅವಧೂತರಾಗಿದ್ದರು.

***

ಜನಪದನಿಲಯದ ಅಂತರಂಗದಲ್ಲಿ.........೨೮

"ಕೆಲ ಜನರು ತಮ್ಮಲ್ಲಿರುವ ಸತ್ಯಕ್ಕಿಂತ ಹೆಚ್ಚಾಗಿ ಬೇರೆಯವರಲ್ಲಿರುವ ಸುಳ್ಳಿನಲ್ಲಿ ಹೆಚ್ಚು ಭರವಸೆಯನ್ನು ಕಾಣುತ್ತಾರೆ." *–ಹೆಬೆಲ್*



ನಾನು ಮೇಲುಕೋಟೆಗೆ ಬಂದು ಜನಪದ ಸೇವಾ ಟ್ರಸ್ಟಿನ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ಮತ್ತು ಎಲ್ಲ ಗಂಭೀರತೆಯೊಂದಿಗೆ ಪ್ರಾರಂಭವಾಡುವ ಮೊದಲು ನಂಜನಗೂಡು ತಾಲೂಕಿನ ಕೆಂಪಿಸಿದ್ಧನಹುಂಡಿ ಎಂಬ ಗ್ರಾಮದಲ್ಲಿ ಒಂದು ವರ್ಷ ಗಾಂಧಿ ಸ್ಮಾರಕ ನಿಧಿಯ ಸೇವಕನಾಗಿ ಕೆಲಸ ಮಾಡಿದೆ. ಅದೇ ತಾನೆ ನಾನು ಮದುವೆಯಾಗಿದ್ದ ಗಿರಿಜಾರವರು ಸಹ ನನ್ನೊಂದಿಗೆ ಗ್ರಾಮ ಸೇವಕರಾದರು. ಗಾಂಧೀಜಿಯವರ ಸೇವಾ ಪರಂಪರೆಯಲ್ಲಿ ದಂಪತಿ ಕಾರ್ಯಕರ್ತರಿಗೆ ವಿಶೇಷವಾದ ಮನ್ನಣೆ ಮತ್ತು ಪ್ರೋತ್ಸಾಹವಿರುತ್ತದೆ ಆದ್ದರಿಂದ ಗಾಂಧಿ ಸ್ಮಾರಕ ನಿಧಿಯವರು ನನ್ನ ಪತ್ನಿಯನ್ನು ಸಹ ಕೆಲಸಕ್ಕೆ ಕರೆದುಕೊಂಡು ಬರಲು ಹೇಳಿದರು. ನಾವು ಗಾಂಧಿ ಸ್ಮಾರಕ ನಿಧಿಗೆ ಸೇರಿಕೊಂಡಾಗ ಆ ನಿಧಿಗೆ ರಾಷ್ಟ್ರಮಟ್ಟದಲ್ಲಿ ರಂಗನಾಥ್ ದಿವಾಕರ್‌ರವರು ಅಧ್ಯಕ್ಷರಾಗಿದ್ದರು. ಕರ್ನಾಟಕ ರಾಜ್ಯದ ಶಾಖೆಗೆ ನಿಟ್ಟೂರು ಶ್ರೀನಿವಾಸ್‌ರಾವ್ ಅಧ್ಯಕ್ಷರಾಗಿದ್ದರು ಮತ್ತು ರಾಮಚಂದ್ರ ವಡವಿಯವರು ಕಾರ್ಯದರ್ಶಿಯಾಗಿದ್ದರು. ದಿವಾಕರರು, ನಿಟ್ಟೂರರು ಮತ್ತು ವಡವಿಯವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು ಮತ್ತು ಕರ್ನಾಟದಲ್ಲಿ ಗಾಂಧಿ ಸೇವಾ ಪರಂಪರೆಯನ್ನು ಎತ್ತಿ ಹಿಡಿದಂಥವರು, ಮುಂದೆ ಸಾಗಿಸಿದಂಥವರು ಆಗಿದ್ದರು. ಇವರೆಲ್ಲರೂ ಖಾದಿಯ ಕೆಲಸವನ್ನು ಸಹ ಮಾಡಿದಂಥವರಾಗಿದ್ದರು. ರಾಮಚಂದ್ರ ವಡವಿಯವರಂತೂ ಖಾದಿ ಕೆಲಸಕ್ಕಾಗಿ ತಮ್ಮ ಜೀವನವನ್ನೆ ಮುಡಿಪಾಗಿಟ್ಟಿದ್ದಂಥವರು ಅವರ ಜೀವನ ರಾಷ್ಟ್ರಸೇವೆಗೆ, ಗಾಂಧಿ ತತ್ವಜ್ಞಾನಕ್ಕೆ ಸಮರ್ಪಿತವಾಗಿತ್ತು. ವಿದ್ಯಾರ್ಥಿಯಾಗಿದ್ದಾಗಲೆ ಅವರು ಶಾಲೆ ಬಿಟ್ಟು ಈ ಮಾರ್ಗವನ್ನು ಸೇರಿದವರು. ಇದೊಂದು ಗಾಂಧಿ ನಂಜು, ಸ್ವಾತಂತ್ರ್ಯ ಪ್ರೀತಿಯ ಹುಚ್ಚು

ಎಂದು ದಿವಾಕರರು ವಡವಿಯವರಬಗ್ಗೆ ಹೇಳಿದ್ದಾರೆ. ಗಿರಿಜಾ ಮತ್ತು ನಾನು ಗಾಂಧೀ ಸ್ಮಾರಕ ನಿಧಿಯನ್ನು ಸೇರುವ ಮೊದಲು ವಡವಿಯವರನ್ನು ನೋಡುವ ಅವಕಾಶ ಒದಗಿರಲಿಲ್ಲ. ಈಗ ನಿಧಿಯನ್ನು ಸೇರಲು ತೀರ್ಮಾನಿಸಿದ್ದರಿಂದ ಬೆಂಗಳೂರಿನಲ್ಲಿದ್ದ ಗಾಂಧಿ ಸ್ಮಾರಕ ನಿಧಿಯ ಕಛೇರಿಗೆ ನಾವಿಬ್ಬರೂ ಹೋಗಬೇಕಾಯಿತು. ಆಗ ಗಾಂಧಿ ಸ್ಮಾರಕ ನಿಧಿಗೆ ತನ್ನ ಸ್ವಂತ ಕಟ್ಟಡವಿರಲಿಲ್ಲ, ಅದು ನೆಹರೂ ವೃತ್ತದಲ್ಲಿ ಒಂದು ಬಾಡಿಗೆ ಕಟ್ಟಡದ ಮೊದಲ ಅಂತಸ್ತಿನ ಭಾಗದಲ್ಲಿ ತನ್ನ ಕಛೇರಿಯನ್ನು ಹೊಂದಿತ್ತು. ನಾವಿಬ್ಬರೂ ವಡವಿಯವರನ್ನು ಭೇಟಿ ಮಾಡುವುದಕ್ಕಾಗಿ ಮತ್ತು ನಮ್ಮ ಉದ್ದೇಶವನ್ನು ತಿಳಿಸುವುದಕ್ಕಾಗಿ ನಿಧಿಯ ಕಛೇರಿಯ ಮೆಟ್ಟಿಲನ್ನು ಹತ್ತಿದೆವು. ಮೇಲಿನ ಒಂದು ಕೋಣೆಯಲ್ಲಿ ವಡವಿಯವರು ಕುಳಿತಿದ್ದರು ಆಗ ಅವರ ವಯಸ್ಸು ಸುಮಾರು ೭೦ ಇದ್ದಿರಬಹುದು. ಆಗಲೆ ಅವರಿಗೆ ಕಿವಿ ಕೇಳುವುದು ಸ್ವಲ್ಪ ಕಷ್ಟವಾಗಿತ್ತು. ಅವರು ಯಾವಾಗಲೂ ಗಾಂಧಿ ಟೋಪಿಯನ್ನು ಧರಿಸುತ್ತಿದ್ದರು. ಆದರೆ ವಿರಾಮದ ವೇಳೆಯಲ್ಲಿ ಮತ್ತು ತಾವೊಬ್ಬರೆ ಇದ್ದಾಗ ಟೋಪಿಯನ್ನು ಧರಿಸುತ್ತಿರಲಿಲ್ಲ. ನಾವು ಹೋದಾಗ ಅವರು ಖಾದಿ ಬನಿಯನ್ ಧರಿಸಿದ್ದರು. ತಲೆಯ ಮೇಲೆ ಟೋಪಿ ಇರಲಿಲ್ಲ. ಬಹಳಷ್ಟು ಕೂದಲು ಉದುರಿದ್ದವು. ನಾವು ಹೋಗಿ ನಮಸ್ಕಾರ ಮಾಡಿ ಪರಿಚಯ ಮಾಡಿಕೊಂಡೆವು. ನಾನು ಜಯಪ್ರಕಾಶರೊಂದಿಗೆ ಬಿಹಾರಿನಲ್ಲಿದ್ದುದು ಮತ್ತು ಅಲ್ಲಿಯ ಹಳ್ಳಿಗಳಲ್ಲಿ ಕೆಲಸ ಮಾಡಿದುದನ್ನು ಹೇಳಿದೆ. ಗಿರಿಜಾರವರು ಶಿಶುವಿಹಾರದ ಅಧ್ಯಾಪಕಿಯ ಶಿಕ್ಷಣವನ್ನು ಪಡೆದು ಕೊಂಚ ಅನುಭವವಿರುವುದನ್ನೂ ತಿಳಿಸಿದೆ. ಅವರು ಇನ್ನೂ ಕೆಲವು ಮಾಹಿತಿಯನ್ನು ನಮ್ಮಿಂದ ಪಡೆದರು. ನಂತರ ನಮ್ಮ ಬಗ್ಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ನಮ್ಮನ್ನು ನಿಧಿಯ ಕಾರ್ಯಕರ್ತರಾಗಿ ನಿಯಮಿಸಿಕೊಳ್ಳಲು ತಮ್ಮ ಸಮ್ಮತಿ ಸೂಚಿಸಿದರು. ನನಗೆ ಪ್ರತಿ ಮಾಹೆ ೧೦೦ ರೂ ವೇತನ ಕೊಡುವುದಾಗಿಯೂ, ಗಿರಿಜಾರವರಿಗೆ ೫೦ ರೂ ವೇತನ ಕೊಡುವುದಾಗಿಯೂ ತಿಳಿಸಿದರು ಮತ್ತು ಕೆಂಪಿಸಿದ್ದನಹುಂಡಿ ಸೇವಾ ಕೇಂದ್ರಕ್ಕೆ ಹೋಗಲು ಸೂಚಿಸಿದರು. ನನಗೂ ಮತ್ತು ಗಿರಿಜಾರವರಿಗೂ ತುಂಬಾ ಸಂತೋಷವಾಯಿತು, ಮತ್ತು ಆದಷ್ಟು ಬೇಗ ಅಲ್ಲಿಗೆ ಹೋಗುವುದಾಗಿ ಹೇಳಿದೆವು.

ಮುಂದುವರಿಯುವುದು............

***

ಜನಪದ ಸೇವಾ ಟ್ರಸ್ಟ್ ಅಂಗಳ



ಜನಪದ ಸೇವಾ ಟ್ರಸ್ಟ್ ನೂರಕ್ಕೆ ನೂರು ಜನಾಧಾರಿತ ಸಂಸ್ಥೆ. ಅಂದರೆ ಸಂಸ್ಥೆಯ ಸಾರ್ವಜನಿಕ ಕಾರ್ಯವೆಲ್ಲವು ಸಾರ್ವಜನಿಕರು ಕೊಡುವ ಧನಸಹಾಯದಿಂದಲೆ ನಡೆಯುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಅಥವಾ ಸ್ಥಳೀಯ ಸಂಸ್ಥೆಗಳಿಂದ ಧನಸಹಾಯವನ್ನು ಪಡೆಯುತ್ತಿಲ್ಲ. ಟ್ರಸ್ಟಿಗೆ ಭೇಟಿ ಕೊಡುವ ಅಭಿಮಾನಿಗಳು ಟ್ರಸ್ಟಿನ ಆದಾಯದ ಮೂಲವೇನೆಂದು ಪ್ರಶ್ನಿಸಿದಾಗ ಈ ಉತ್ತರವನ್ನು ಅವರಿಗೆ ಕೊಡಲಾಗುತ್ತದೆ ಆಗ ಅವರು ಆಶ್ಚರ್ಯ ಪಡುವುದರ ಜೊತೆಗೆ ಸರ್ಕಾರದಿಂದ ಧನಸಹಾಯ ಪಡೆಯುವುದರಲ್ಲಿ ತಪ್ಪೇನಿದೆ ಎಂದು ಕೇಳುತ್ತಾರೆ. ಸರ್ಕಾರ ಲೆಕ್ಕ ಪತ್ರ ಕೇಳುತ್ತದೆ ಮತ್ತು ಅನಾವಶ್ಯಕ ಪ್ರಶ್ನೆಗಳನ್ನು ಕೇಳುತ್ತದೆ ಎಂಬ ಕಾರಣದಿಂದಾಗಿ ಸರ್ಕಾರದ ಧನಸಹಾಯವನ್ನು ಪಡೆಯುತ್ತಿಲ್ಲವೆ ಎಂಬುದಾಗಿ ಮರುಪ್ರಶ್ನೆ ಮಾಡುತ್ತಾರೆ. ಆದರೆ ಇದಕ್ಕೆ ಸಂಸ್ಥೆಯು ಕೊಡುವ ಉತ್ತರವೇನೆಂದರೆ ಟ್ರಸ್ಟ್ ಮೂಲಭೂತವಾಗಿ ಸರ್ವೋದಯ ವಿಚಾರದ ಸಂಸ್ಥೆಯಾಗಿರುವುದರಿಂದ ಸ್ಥಳೀಯ ಜನರ ಸಹಾಯದಿಂದಲೆ ಸಂಸ್ಥೆಯ ಕಾರ್ಯಕಲಾಪಗಳು ನಡೆಯಬೇಕೆಂಬುದು ಮುಖ್ಯ. ಅಲ್ಲದೆ ಜನಸಹಾಯವು ಒಂದು ರೀತಿಯಲ್ಲಿ ಸಂಸ್ಥೆಯ ಕೆಲಸಕ್ಕೆ ಜನರ ಸಮ್ಮತಿ ಇದ್ದಂತೆ. ಸರ್ವೋದಯ ಕ್ಷೇತ್ರದಲ್ಲಿ ಕೆಲಸ ಮಾಡಿದ ನಾಯಕರೆಲ್ಲರು ಮುಖ್ಯವಾಗಿ ಮಹಾತ್ಮಗಾಂಧಿ, ಆಚಾರ್ಯ ವಿನೋಬಾ ಭಾವೆ, ಜೆ.ಸಿ.ಕುಮಾರಪ್ಪ, ಜಯಪ್ರಕಾಶ್‌ನಾರಾಯಣ್ ಮುಂತಾದವರು ತಮ್ಮೆಲ್ಲ ಕೆಲಸಗಳಿಗೆ ಸಾರ್ವಜನಿಕ ಸಹಾಯವನ್ನೆ ಅವಲಂಬಿಸಿದ್ದರು. ಸರ್ಕಾರದ ಧನಸಹಾಯ ಅವರ ದೃಷ್ಟಿಯಲ್ಲಿ ಗೌಣವಾಗಿದ್ದಿತು. ಆದರೆ ಇದರ ಅರ್ಥ ಸಂಸ್ಥೆಯು ಲೆಕ್ಕ ಪತ್ರದ ವಿಚಾರದಲ್ಲಿ ಅಸಡ್ಡೆಯಿಂದಿದೆಯೆಂದು ಅರ್ಥವಲ್ಲ. ಲೆಕ್ಕಪತ್ರಗಳೆಲ್ಲವು ಕ್ರಮವಾಗಿ ಇಡಲ್ಪಟ್ಟಿರುತ್ತವೆ " ತನ್ನ ಕಾಲಮೇಲೆ ನಿಲ್ಲುವ ಪ್ರಯತ್ನ ಮಾಡುವವನಿಗೆ ದೇವರು ಸಹಾಯ ಮಾಡುತ್ತಾನೆ" ಎಂಬರ್ಥದ ಇಂಗ್ಲಿಷಿನ ಗಾದೆ ಮಾತಿನಂತೆ ಸಂಸ್ಥೆ ನಡೆದುಕೊಳ್ಳಲು ಬಯಸುತ್ತದೆ. ಹೀಗೆ ಸಂದರ್ಶಕರಿಗೆ ಉತ್ತರಿಸಿದಾಗ ಅವರು ಸಂತೋಷ ಪಡುತ್ತಾರೆ ಮತ್ತು ತಮ್ಮ ನೆರವಿನ ಹಸ್ತವನ್ನು ನೀಡುತ್ತಾರೆ. ಈ ಪದ್ಧತಿಯಲ್ಲಿ ಟ್ರಸ್ಟ್ ಕಳೆದ ೪೫ ವರ್ಷಗಳಿಂದ ನಡೆದುಕೊಂಡು ಬಂದಿದೆ. ಹೀಗೆ ಧನಸಹಾಯ ಮಾಡುವಂಥವರಲ್ಲಿ ಅನೇಕ ಪ್ರಕಾರದ ಮಹನಿಯರಿದ್ದಾರೆ. ಪ್ರತಿ ತಿಂಗಳು ತಪ್ಪದೆ ೧೦ ರೂಪಾಯಿಗಳನ್ನು ಕಳುಹಿಸುವಂಥ ಅಭಿಮಾನಿಗಳಿದ್ದಾರೆ. ಹೀಗೆ ಸಂಸ್ಥೆಯ ಕಾರ್ಯಗಳು ಜನಾಧಾರಿತವಾಗಿ ನಡೆದುಕೊಂಡು ಬರುತ್ತಿರುವುದರಿಂದ ಕಾರ್ಯಕರ್ತರಲ್ಲಿ ಮತ್ತು ಸಂಸ್ಥೆಯ ಆಶ್ರಯದಲ್ಲಿರುವ ಮಕ್ಕಳಲ್ಲಿ ಆತ್ಮ ಗೌರವದ ಪ್ರಜ್ಞೆ ಉದ್ದೀಪಿತಗೊಳ್ಳುವುದಕ್ಕೆ ಸಹಕಾರಿಯಾಗಿದೆ.

(ಇದು ೨೦೦೬ ಫೆಬ್ರವರಿ ಮಾಹೆಗೆ ಸಂಬಂಧಿಸಿದ ವಿಚಾರ)

ಸಂತಾಪ

ರಂಗಭೂಮಿಯ ಮೂಲಕ ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕಾಗಿ ಅಹರ್ನಿಶಿ ದುಡಿಯುತ್ತಾ ಅಸಂಖ್ಯಾತ ಯುವಕರ ಹೃದಯ ಮತ್ತು ಮನಸ್ಸನ್ನು ಜಯಿಸಿದ್ದ ಹಾಗೂ ಬೆಂಗಳೂರು ವಿಶ್ವ ವಿದ್ಯಾನಿಲಯದ ಗಾಂಧೀ ಭವನದ ಬೆಳವಣಿಗೆಯ ಬಗ್ಗೆ ಅಪಾರವಾದ ಕನಸನ್ನು ಹೊತ್ತಿದ್ದ ಸಿ.ಜಿ.ಕೃಷ್ಣಸ್ವಾಮಿಯವರು ೨೦೦೬ ಜನವರಿ ೧೧ರಂದು ತೀರಿಕೊಂಡರು.

ಕನ್ನಡ ಸಾರಸ್ವತ ಲೋಕದ ದಿಗ್ಗಜ ಪ್ರೊ.ಎಸ್.ಕೆ ರಾಮಚಂದ್ರರಾವ್‌ರವರು ೨೦೦೬ ಫೆಬ್ರವರಿ ೨ರಂದು ತೀರಿಕೊಂಡರು.

ಇವರಿಬ್ಬರ ನಿಧನಕ್ಕಾಗಿ ಜನಪದ ವಿಚಾರ ತನ್ನ ಅಂತರಾಳದ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೆ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಅದರಲ್ಲಿಯೂ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಹ ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ನಿಮ್ಮನ್ನು ಜನಪದ ವಿಚಾರದ ಲೇಖಕರ ಬಳಗಕ್ಕೆ ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಸರ್ವೋದಯ ದೃಷ್ಟಿಯಿಂದ ವಿಶ್ಲೇಷಿಸಿ ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ. ಲೇಖನವು ಜನಪದ ವಿಚಾರದ ನಾಲ್ಕೈದು ಪುಟಗಳಿಗೆ ಸೀಮಿತವಾಗಿರುವಂತೆ ಇರಬೇಕೇಂಬುದಷ್ಟೆ ನಮ್ಮ ವಿನಂತಿ. ಈ ಲೇಖಕರ ಬಳಗಕ್ಕೆ ಸೇರಬಹುದಾದಂಥ ಸ್ನೇಹಿತರಿದ್ದರೆ ಅವರ ವಿಳಾಸವನ್ನು ತಿಳಿಸಬೇಕಾಗಿ ವಿನಂತಿ. ನೀವು ನಮ್ಮ ಈ ಕೋರಿಕೆಯನ್ನು ಮನ್ನಿಸುತ್ತೀರೆಂದು ನಂಬಿದ್ದೇವೆ ಮತ್ತು ನಿಮ್ಮ ಉತ್ತರವನ್ನು ನಿರೀಕ್ಷಿಸುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(–ಸಂಪಾದಕರು)

KA-SKMND-470-2003-05
Regd. no. KAR/KAN/2000/3820

ತೆರೆದ–ಅಂಚೆ

TO,

***jANAPADA VICHARA* -** Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ®. Melkote. Dist- mandya – 571431
Phone : 08236 – 298754 e-mail : janapada@yahoo.com